ವಿಜಯಪುರ | ಸಂಪುಟ 01 | ಸಂಚಿಕೆ 272 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಶನಿವಾರ ಡಿಸೆಂಬರ್ 23, 2023



"ನಾನು ಲೋಕಸಭಾ ಚುನಾವಣೆ ಟಿಕೆಟ್ ಆಕಾಂಕ್ಷಿ ಅಲ್ಲ ಎಂದು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಕಾಂಗ್ರೆಸ್‌ನಿಂದ ಯಾರನ್ನೇ ನಿಲ್ಲಿಸಿದರೂ ನಾನು ಅವರನ್ನು ಗೆಲ್ಲಿಸಲು ಶ್ರಮಿಸುತ್ತೇನೆ. ಲೋಕಸಭಾ ಚುನಾವಣೆಗೂ ನನ್ನ ದೆಹಲಿ ಭೇಟಿಗೂ ಸಂಬಂಧವಿಲ್ಲ.

– ಜಗದೀಶ್ ಶೆಟ್ಟರ್
ಮಾಜಿ ಮುಖ್ಯಮಂತ್ರಿಗಳು

ನಿಷೇಧ ಹಿಂಪಡೆಯಲು ಸೂಚನೆ ನೀಡಿದ ಸಿಎಂ ಸಿದ್ದರಾಮಯ್ಯ | ಬಿಜೆಪಿ ಸರ್ಕಾರದ ಅವಧಿಯಲ್ಲಿ ತರಲಾಗಿದ್ದ ಹಿಜಾಬ್ ನಿಷೇಧ

# ರಾಜ್ಯದಲ್ಲಿ ಹಿಜಾಬ್ ನಿಷೇಧ ವಾಪಸ್!

ಮೈಸೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ತರಲಾಗಿದ್ದ ಹಿಜಾಬ್ ನಿಷೇಧವನ್ನು ಹಿಂಪಡೆಯಲು ಸೂಚನೆ ನೀಡಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮೈಸೂರಿನ ನಂಜನಗೂಡು ತಾಲೂಕಿನ ಕವಲಂದೆ ಗ್ರಾಮದಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಹಿಜಾಬ್ ನಿಷೇಧವನ್ನು ವಾಪಸ್ ಪಡೆಯಲು ಸೂಚನೆ ನೀಡಿದ್ದೇನೆ. ಪ್ರಧಾನಿ ಮೋದಿ ಅವರ ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಬೋಗಸ್. ಬಟ್ಟೆ, ಉಡುಪು, ಜಾತಿ, ಆಧಾರದ ಮೇಲೆ ಜನರನ್ನು ವಿಭಜಿಸುವ, ಸಮಾಜವನ್ನು ವಿಭಜಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ. ಹೀಗಾಗಿ ಹಿಜಾಬ್ ನಿಷೇಧವನ್ನು ವಾಪಾಸ್ ಪಡೆಯಲು ಹೇಳಿದ್ದೇನೆ ಎಂದು ಹೇಳಿದರು.

ಎಲ್ಲರೂ ಹಿಜಾಬ್ ಧರಿಸಿ ಹೋಗಬಹುದು. ಆದೇಶ ಹಿಂಪಡೆಯಲು ಸೂಚಿಸಿದ್ದೇನೆ. ಉಡುಪು, ಊಟ ಮಾಡುವುದು ನಿಮ್ಮ ಆಯ್ಕೆ. ಅದಕ್ಕೆ ನಾವು ಅಡ್ಡಿಪಡಿಸುವುದಿಲ್ಲ. ಮತಕ್ಕಾಗಿ ರಾಜಕಾರಣ ಮಾಡುವುದು ತಪ್ಪು. ಬಡವರಿಗಾಗಿ ನಮ್ಮ ಸರ್ಕಾರ ಕೆಲಸ ಮಾಡುತ್ತದೆ. ಇದರಿಂದ ವಿಚಲಿತರಾಗುವ ಪ್ರಶ್ನೆ ಇಲ್ಲ. ರಾಜೀ ಮಾಡಿಕೊಳ್ಳುವ ಪ್ರಶ್ನೆ ಇಲ್ಲ. ಸುಳ್ಳು, ಮೋಸ ಮಾಡುವವರ ಜೊತೆ ಹೋಗಬೇಡಿ ಎಂದು ಹೇಳಿದರು.

ಈ ಮೂಲಕ ಕಾಂಗ್ರೆಸ್ ಸರ್ಕಾರವು ಹಿಂದಿನ ಬಿಜೆಪಿ ಸರ್ಕಾರದ ಶೈಕ್ಷಣಿಕ ಸಂಸ್ಥೆಗಳಲ್ಲಿ ತಂದಿದ್ದ ಹಿಜಾಬ್ ನಿಷೇಧವನ್ನು ತೆರವು ಮಾಡುತ್ತಿದೆ. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಹಿಜಾಬ್ ಧರಿಸಿ ತೆರಳಲು ಅವಕಾಶ ನೀಡಲು ಮುಂದಾಗಿದೆ.



## ರಾಜ್ಯದಲ್ಲಿ ಕೊರೊನಾ ಸಕ್ರಿಯ ಪ್ರಕರಣಗಳು 175ಕ್ಕೆ ಏರಿಕೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ 68 ಮಂದಿ ಸೇರಿದಂತೆ ರಾಜ್ಯದಲ್ಲಿ ಶುಕ್ರವಾರ 78 ಜನರಿಗೆ ಕೊರೋನಾ ಪಾಸಿಟಿವ್ ದೃಢಪಟ್ಟಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೋಂಕಿತ ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದಾರೆ.

ಕಳೆದ 24 ಗಂಟೆಗಳಲ್ಲಿ 78 ಹೊಸ ಕೋವಿಡ್–19 ಪಾಸಿಟಿವ್ ಪ್ರಕರಣಗಳು ವರದಿಯಾಗಿದ್ದು, ಇದರೊಂದಿಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 175ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಶುಕ್ರವಾರ ಆಸ್ಪತ್ರೆಯಿಂದ 7 ಮಂದಿ ಡಿಸ್ಚಾರ್ಜ್ ಆಗಿದ್ದು, 175 ಪ್ರಕರಣಗಳಲ್ಲಿ 162 ಜನ ಮನೆಯಲ್ಲಿ ಕ್ವಾರಂಟೈನ್ ಆಗಿದ್ದಾರೆ ಮತ್ತು 13 ಜನ ಆಸ್ಪತ್ರೆಗೆ ದಾಖಲಾಗಿದ್ದಾರೆ. ಆಸ್ಪತ್ರೆಗೆ ದಾಖಲಾದ 13 ಮಂದಿಯಲ್ಲಿ 8 ಮಂದಿ ಐಸಿಯುನಲ್ಲಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯಲ್ಲಿಯೇ ಇಂದು 68 ಪಾಸಿಟಿವ್ ಪ್ರಕರಣಗಳು ವರದಿಯಾಗಿದ್ದು, ನಗರದಲ್ಲಿ 156 ಸಕ್ರಿಯ ಪ್ರಕರಣಗಳಿವೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ವಿದ್ಯಾರ್ಥಿ ವೇತನ ಕಡಿತಗೊಳಿಸಿರುವ ರಾಜ್ಯ ಸರಕಾರದ ಕ್ರಮಕ್ಕೆ ಖಂಡನೆ

# ವಿದ್ಯಾರ್ಥಿ ವೇತನ ಬಿಡುಗಡೆಗೆ ಆಗ್ರಹಿಸಿ ಎಬಿವ್ಹಿಪಿ ಪ್ರತಿಭಟನೆ

ಉದಯರಶ್ಮಿ ನ್ಯೂಸ್

ವಿಜಯಪುರ: 2022–23 ನೇ ಸಾಲಿನ ಕಾರ್ಮಿಕರ ಕಲ್ಯಾಣ ನಿಧಿ ಯೋಜನೆಯ ಅಡಿಯಲ್ಲಿರುವ ವಿದ್ಯಾರ್ಥಿ ವೇತನ ಬಿಡುಗಡೆಗೆ ಆಗ್ರಹಿಸಿ ಹಾಗೂ ವಿದ್ಯಾರ್ಥಿ ವೇತನ ಕಡಿತಗೊಳಿಸಿರುವ ರಾಜ್ಯ ಸರ್ಕಾರದ ವಿರುದ್ಧ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡು ವಿಜಯಪುರ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಉತ್ತರ ಪ್ರಾಂತ ರಾಜ್ಯ ಕಾರ್ಯದರ್ಶಿ ಸಚೀನ ಕುಳಗೇರಿ ಮಾತನಾಡಿ, ರಾಜ್ಯದಲ್ಲಿ ಬಡ ಕಾರ್ಮಿಕರ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ಅಪಾಯಕಾರಿ, ಅಸುರಕ್ಷಿತ, ಹಾಗೂ ಅಸಂಘಟಿತ ವಲಯದಲ್ಲಿ ಕಾರ್ಯ ನಿರ್ವಹಿಸುವ ಕಾರ್ಮಿಕರ ಮತ್ತು ಅವರ ಕುಟುಂಬದ ರಕ್ಷಣೆಗಾಗಿ ಸರಕಾರಗಳು ಬದ್ಧವಾಗಿರಬೇಕು, ಆದರೆ ರಾಜ್ಯ ಸರಕಾರ 2022–23 ನೇ ಸಾಲಿನ ಕಾರ್ಮಿಕರ ಕಲ್ಯಾಣ ನಿಧಿ ಯೋಜನೆಯ ಅಡಿಯಲ್ಲಿರುವ ವಿದ್ಯಾರ್ಥಿ ವೇತನ ಬಿಡುಗಡೆ ಕಾರ್ಯಕ್ರಮವನ್ನು ನವಂಬರ್ 09 ರಂದು ಮಾಡಿದೆ ಆದ–'ರೆ ಇಲ್ಲಿಯವರೆಗೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಜಮೆ ಆಗದೆ ಬಡ ವಿದ್ಯಾರ್ಥಿಗಳ ಜೀವನದ ಜೊತೆ ರಾಜ್ಯ ಸರ್ಕಾರ ಚೆಲ್ಲಾಟ ಆಡುತ್ತಿರುವುದು ಖಂಡನೀಯ ಹಾಗೂ 2022–23 ನೇ ಸಾಲಿನ ಕಾರ್ಮಿಕರ ಕಲ್ಯಾಣ ನಿಧಿ ಯೋಜನೆಯ ಅಡಿಯಲ್ಲಿರುವ ವಿದ್ಯಾರ್ಥಿ ವೇತನ ತಕ್ಷಣ ಜಮೆ ಮಾಡಬೇಕು, ಯಾವುದೇ ರೀತಿ ಕಡಿತ ಮಾಡದೆ ಪೂರ್ಣ ವಿದ್ಯಾರ್ಥಿ ವೇತನವನ್ನು ನೀಡಬೇಕು. ವಿದ್ಯಾರ್ಥಿ ವೇತನಕ್ಕೆ ಸಲ್ಲಿಕೆ ಮಾಡಿದ್ದ 4 ಲಕ್ಷ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವುದನ್ನು ರದ್ದುಗೊಳಿಸಿರುವ ಸರಕಾರ ಎಲ್ಲರಿಗೂ ವಿದ್ಯಾರ್ಥಿ ವೇತನ ನೀಡಬೇಕೆಂದರು.

ನಗರ ಕಾರ್ಯದರ್ಶಿ ಕು. ಕವಿತಾ ಬಿರಾದಾರ ಮಾತನಾಡಿ, ಕಾರ್ಮಿಕರನ್ನು ನೋಂದಣಿ ಮಾಡಿಸಿಕೊಂಡಿದ್ದ ಹಿಂದಿನ ಸರ್ಕಾರ ಎಲ್ಲರಿಗೂ ಸಹಾಯ ಹಸ್ತವನ್ನು ಚಾಚಿತ್ತು. ಜೊತೆಗೆ, ಎಲ್ಲ ಕಾರ್ಮಿಕರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಆಗುವಂತೆ ಹಿಂದೆ ಇದ್ದ ವಿದ್ಯಾರ್ಥಿ ವೇತನಕ್ಕಿಂತ ಶೇ.50ರಷ್ಟು ಸಹಾಯಧನ ಹೆಚ್ಚಳ ಮಾಡಿತ್ತು. ಆದರೆ, ಇಂದಿನ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಾರ್ಮಿಕ ಇಲಾಖೆಯಲ್ಲಿ ಹಣವಿಲ್ಲವೆಂದು ನೆಪವೊಡ್ಡಿ ಕಾರ್ಮಿಕರ ಮಕ್ಕಳಿಗೆ ನೀಡಲಾಗುತ್ತಿದ್ದ ವಿದ್ಯಾರ್ಥಿ ವೇತನದ ಶೇ.60 ಮೊತ್ತವನ್ನು ಕಡಿತಗೊಳಿಸಿ ಆದೇಶ ಹೊರಡಿಸಿರುವ ಸರಕಾರದ ತೀವ್ರವಾಗಿ ಖಂಡಿಸಿದರು.




ಈ ಸಂದರ್ಭದಲ್ಲಿ ಎಬಿಬಿಪಿ ಮುಖಂಡರಾದ ಮಂಜುನಾಥ ಹಳ್ಳಿ, ಮಲ್ಲಿಕಾರ್ಜುನ ಮಾಳಿ, ಸಿದ್ದು ಪತ್ತಾರ, ಸಂತೋಷ ದೊಡಮನಿ, ಸಂದೀಪ ಅಳಗುಂಡಿ, ಪೂಜಾ ವೀರಶೆಟ್ಟಿ, ಪ್ರವೀಣ ಬಿರಾದಾರ, ಹರ್ಷಾ ನಾಯಕ, ಶಿವನಗೌಡ ಬಿರಾದಾರ, ಐಶ್ವರ್ಯ, ಆನಂದ ಬಿರಾದಾರ, ಮಂಜುನಾಥ ದೊಡಮನಿ, ಸತೀಷ ರಾಠೋಡ, ಮಲ್ಲು ಕೋಲ್ಹಾರ, ಸಚೀನ ಬೋನಾಳ, ಅವಿನಾಶ ಮದಭಾವಿ, ಅಮೀತ, ಶ್ರವಣಕುಮಾರ, ಇನ್ನಿತರರಿದ್ದರು.

## ರಾಜ ನುಡಿ

ಕಮಲದ ಕಾಂಡದ ಉದ್ದ ಕೊಳದ ನೀರಿನ ಆಳದಷ್ಟಿರುವಂತೆ ಮನುಷ್ಯನ ಏಳಿಗೆಯ ಎತ್ತರವು ಅವನೊಳಗಿನ ಇಚ್ಚಾ ಶಕ್ತಿಯ ಸಾಮರ್ಥ್ಯದಷ್ಟಿರುತ್ತದೆ.

–ಡಾ. ರಾಜಶೇಖರ ನಾಗೂರ



## ವಚನ ಚಿಂತನ 262

*ಸಾವಯವ ಮತ್ತು ನಿರವಯವದ ಸಂಗಮವೇ ಇಷ್ಟಲಿಂಗ*

*ಅಂತರಂಗದೊಳಗಿರ್ದ ನಿರವಯಲಿಂಗವನು*
*ಸಾವಯವಲಿಂಗವಮಾಡಿ,*
*ಶ್ರೀಗುರುಸ್ವಾಮಿ ಕರಸ್ಥಲಕ್ಕೆತಂದುಕೊಟ್ಟನಾಗಿ,*
*ಆ ಇಷ್ಟಲಿಂಗವೆ ಅಂತರಂಗವನಾವರಿಸಿ*
*ಅಂತರಂಗದ ಕರಣಂಗಳೆ ಕಿರಣಂಗಳಾಗಿ*
*ಬೆಳಗುವ ಚಿದಂಶವೆ ಪ್ರಾಣಲಿಂಗವು,*
*ಆ ಮೂಲಚೈತನ್ಯವೆ ಭಾವಲಿಂಗವು.*
*ಇದನರಿದು, ನೋಡುವ*
*ತಾನು ತಾನಾದಲ್ಲದೆ, ಇದಿರಿಟ್ಟುತೋರುವುದಿಲ್ಲವಾಗಿ*
*ಅಖಂಡ ಪರಿಪೂರ್ಣವಪ್ಪ ನಿಜವು*
*ತಾನೆ,ಕೂಡಲಸಂಗಮದೇವ.*

*– ಬಸವಣ್ಣನವರು*

ವಿಶ್ವವು ಅಚೇತನ=ನಿರವಯವ (inorganic) ಮತ್ತು ಚೇತನ=ಸಾವಯವ (organic) ವಸ್ತುಗಳಿಂದ ನಿರ್ಮಾಣಗೊಂಡಿದೆ, ವಿಶ್ವದ ಕುರುಹಾಗಿರುವ ಇಷ್ಟಲಿಂಗವು ಸಹ ಈ ಎರಡು ವಸ್ತುಗಳಿಂದ ನಿರ್ಮಿತವಾಗಿದೆ. ಇಷ್ಟಲಿಂಗದ ತಯಾರಿಕೆಯಲ್ಲಿ ಬಳಸುವ ಶಿಲೆಯಾದ 'ಪಾಣಿಪೀಠ'ದ ಸುತ್ತಲೂ ಕಂತೆಯನ್ನು ಮೆತ್ತಲಾಗಿರುತ್ತದೆ. ಇಲ್ಲಿ ಪಾಣಿಪೀಠದ ಶಿಲೆಯು ನಿರವಯವವಾದರೆ ಕಂತೆಯು ಸಾವಯವ ಪದಾರ್ಥದ ಇಂಗಾಲವಾಗಿದೆ. ಸಾವಯವ ಮತ್ತು ನಿರವಯವ ವಸ್ತುಗಳ ಸಂಗಮವೇ ಇಷ್ಟಲಿಂಗ ಎಂಬುದಕ್ಕೆ ಬಸವಣ್ಣನವರ ಈ ವಚನವೇ ಸಾಕ್ಷಿ. ವಿಶ್ವಚಾಲನಾ ಶಕ್ತಿ(ಕೂಡಲ ಸಂಗಮದೇವ) ಮಹಾಲಿಂಗದ ಅಂಶವೇ ನಮ್ಮಲ್ಲಿ ಅಡಗಿ ಅದು ಪ್ರಾಣಲಿಂಗವೆನಿಸಿದೆ, ಈ ಪ್ರಾಣಲಿಂಗದ ಅರಿವು ಇಷ್ಟಲಿಂಗದ ಮೂಲಕ ಜಾಗೃತವಾದಾಗ ಭಾವಲಿಂಗವು ಬಲಿದು ಮಹಾಲಿಂಗದೊಂದಿಗೆ ಸಂಪರ್ಕವೇರ್ಪಟ್ಟಾಗ ದೊರೆಯುವ ಅನುಭೂತಿಯೇ ಅಖಂಡ ಪರಿಪೂರ್ಣದ ನಿಜದ ನಿಲವು. ಇದು ಸಾಧ್ಯವಾಗುವುದು ಇಷ್ಟಲಿಂಗದ ಮೂಲಕ ಎಂದಿರುವರು ಬಸವಣ್ಣನವರು.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

ಒಳಮೀಸಲಾತಿ ಜಾರಿಗೆ ಆಗ್ರಹಿಸಿ ವಿಜಯಪುರದಲ್ಲಿ ಸಮಾವೇಶ | ಮುಖಂಡ ಉಮೇಶ ಕಾರಜೋಳ ಮನವಿ

# ಡಿ.24ರಂದು ಮಾದಿಗರ ಆತ್ಮಗೌರವ ಸಮಾವೇಶ

ಉದಯರಶ್ಮಿ ನ್ಯೂಸ್

ವಿಜಯಪುರ: ರಾಜ್ಯದೆಲ್ಲೆಡೆ ಮಾದಿಗ ಮುನ್ನಡೆ, ಮಾದಿಗರ ಆತ್ಮಗೌರವ ಸಮಾವೇಶವು ವಿವಿಧ ಜಿಲ್ಲೆಗಳಲ್ಲಿ ನಡೆಯುತ್ತಿದ್ದು, ಅದರಂತೆ ವಿಜಯಪುರ ಜಿಲ್ಲಾ ಸಮಾವೇಶವನ್ನು ನಗರದ ಇಟಗಿ ಪೆಟ್ರೋಲ ಪಂಪ ಹತ್ತಿರದ ಸಾಯಿ ಗಾರ್ಡನ್ ನಲ್ಲಿ ಡಿ.24 ಭಾನುವಾರ ಬೆಳಗ್ಗೆ 10:30ಕ್ಕೆ ಜಿಲ್ಲಾ ಸಮಾವೇಶ ಆಯೋಜಿಸಿದೆ ಎಂದು ಮುಖಂಡ ಉಮೇಶ ಕಾರಜೋಳ ಹೇಳಿದರು.

ಶುಕ್ರವಾರ ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ಈ ಸಮಾವೇಶದಲ್ಲಿ ಜಿಲ್ಲೆಯ ಸಮಸ್ತ ಮಾದಿಗ, ಸಮಗಾರ, ಮೋಚಿ, ಡೋರ, ಭಂಗಿ, ಇತ್ಯಾದಿ ಮಾದಿಗ ಸಂಬಂಧಿತ ಜಾತಿಗಳ ಯುವಕರು ಬುದ್ದಿಜೀವಿಗಳು, ನೌಕರರು, ಹೋರಾಟಗಾರರು, ಹಾಗೂ ವಿದ್ಯಾರ್ಥಿ ಸಮೂಹ ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾವೇಶವನ್ನು ಯಶಸ್ವಿಗೊಳಿಸಬೇಕು ಎಂದರು.

ಈಗಾಗಲೆ ಒಳಮೀಸಲಾತಿ ಶಿಫಾರಸ್ಸು ಮಾಡಿ ಕೇಂದ್ರಕ್ಕೆ ಕಳುಹಿಸಿರುವದರಿಂದ ಕೇಂದ್ರ ಸರ್ಕಾರವು ಕೂಡಲೇ ಒಳ ಮೀಸಲಾತಿ ಜಾರಿಗೆ ಕ್ರಮ ವಹಿಸಲು ಆಗ್ರಹಿಸಿ ಈ ಸಮಾವೇಶ ಹಮ್ಮಿಕೊಳ್ಳಲಾಗುತ್ತಿದೆ ಎಂದರು.



ಸಮುದಾಯದ ಸ್ವಾಭಿಮಾನದ ಸಂಕೇತವಾಗಿ ಬಸವಮೂರ್ತಿ ಮಾದರ ಚೆನ್ನಯ್ಯ, ಸ್ವಾಮಿಜಿಗಳು ಚಿತ್ರದುರ್ಗ ಇವರ ಸಾನಿಧ್ಯದಲ್ಲಿ ನಡೆಯುವ ಸಮಾವೇಶಕ್ಕೆ ಕೇಂದ್ರ ಸಚಿವ ಎ.ನಾರಾಯಣ ಸ್ವಾಮಿ, ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಂಸದ ರಮೇಶ ಜಿಗಜಿಣಗಿ ಅಧ್ಯಕ್ಷತೆ ವಹಿಸಲಿದ್ದಾರೆ.

ಅತಿಥಿಗಳಾಗಿ ಶಾಸಕರಾದ ದುರ್ಯೋಧನ ಐಹೊಳೆ, ಬಸವರಾಜ ಮತ್ತಿಮಡು, ಮಾಜಿ ಶಾಸಕ ಬಸವರಾಜ ದಡೆಸುಗುರು, ನಿವೃತ್ತ ಐಎಎಸ್/ಕೆಎಎಸ್ ಅಧಿಕಾರಿಗಳಾದ ಅನೀಲ ಕುಮಾರ, ಲಕ್ಷ್ಮೀ ನಾರಾಯಣ, ಗೋನಾಳ ಭೀಮಪ್ಪ, ಬಾಬುರಾವ ಮುಡವಿ, ಸಾಗರ ಸರ್, ಭೀಮಾಶಂಕರ ಅಣಜಿ, ಮಲ್ಲಮ್ಮ ಹ. ಪೂಜಾರಿ, ವಿಜಯಕುಮಾರ ಅಡಕಿ, ಭೀಮಣ್ಣ ಬಿಲ್ಲವ, ರವೀಂದ್ರ ಜಲಧಾರೆ, ಈರಣ್ಣ ಮೌರ್ಯ, ಭಾಗವಹಿಸಲಿದ್ದಾರೆ.

ಮಾದಿಗರ ಈ ಆತ್ಮಗೌರವ ಸಮಾವೇಶಕ್ಕೆ ಸಮುದಾಯದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮುಖಂಡ ಉಮೇಶ ಕಾರಜೋಳ ಕೋರಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಹಣಮಂತ ಬಿರಾದಾರ, ಶರಣು ಬ್ಯಾಳಿ, ಬಾಲಪ್ಪ ಗೂಗಿಹಾಳ,ವಿಠ್ಠಲ ನಡುವಿನಕೇರಿ ಪರಶುರಾಮ ರೋಣಿಹಾಳ, ಸುರೇಶ ಗಚ್ಚಿನಮನಿ, ಸದಾನಂದ ಗುನ್ನಾಪುರ, ಅಯ್ಯಪ್ಪ ದೊಡಮನಿ, ಸುನೀಲ ಸಂದ್ರಿಮನಿ, ದೇವೆಂದ್ರ ಹಡಲಗಿ ಹಾಗೂ ಸಮಾಜದ ಮುಖಂಡರಿದ್ದರು.

ಉಭಯ ಸದನಗಳ 146 ಸಂಸದರ ಅಮಾನತು ಖಂಡಿಸಿ ಕಾಂಗ್ರೆಸ್ ಬೃಹತ್ ಪ್ರತಿಭಟನೆ

# ಬಿಜೆಪಿಯಿಂದ ಪ್ರಜಾತಂತ್ರ ವ್ಯವಸ್ಥೆಗೆ ಧಕ್ಕೆ :ರಾಜು ಆಲಗೂರ

ಉದಯರಶ್ಮಿ ನ್ಯೂಸ್

ವಿಜಯಪುರ: ಲೋಕಸಭೆ ಹಾಗೂ ರಾಜ್ಯಸಭೆಯ ಉಭಯ ಸದನಗಳ 146 ಸಂಸದರನ್ನು ಅಮಾನತ್ತುಗೊಳಿಸಿದ್ದನ್ನು ಖಂಡಿಸಿ ಶುಕ್ರವಾರ ವಿಜಯಪುರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನಗರದ ಡಾ॥ ಬಾಬಾಸಾಹೇಬ ಅಂಬೇಡ್ಕರ್ ವೃತ್ತದಲ್ಲಿ ಜಿಲ್ಲಾಧ್ಯಕ್ಷ ರಾಜು ಆಲಗೂರ ರವರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡು ಪ್ರಜಾಪ್ರಭುತ್ವ ವಿರೋಧಿ, ಜನವಿರೋಧಿ ಕೇಂದ್ರ ಬಿಜೆಪಿ ಸರಕಾರದ ಧೋರಣೆಯನ್ನು ಬಲವಾಗಿ ಖಂಡಿಸಲಾಯಿತು.

ಈ ಸಂದರ್ಭ ಪ್ರತಿಭಟನೆಯನ್ನುದ್ದೇಶಿಸಿ ಜಿಲ್ಲಾಧ್ಯಕ್ಷ ರಾಜು ಆಲಗೂರ ಮಾತನಾಡಿ, ಕೇಂದ್ರದ ಬಿಜೆಪಿ ಸರಕಾರ ಸಂವಿಧಾನ ವಿರೋಧಿಯಾಗಿದ್ದು, ಇವರಿಗೆ ಸಂವಿಧಾನದ ಮೇಲೆ ವಿಶ್ವಾಸವಿಲ್ಲ. ಹಾಗೂ ರಾಷ್ಟ್ರದ ಪ್ರಜಾತಂತ್ರ ವ್ಯವಸ್ಥೆಗೆ ಧಕ್ಕೆ ಮಾಡುತ್ತಿದ್ದು, ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿರುವುದನ್ನು ಕಾಂಗ್ರೆಸ್ ಪಕ್ಷ ಬಲವಾಗಿ ಖಂಡಿಸುತ್ತದೆ. ರಾಜ–ಕೀಯ ದ್ವೇಷ ಸಾಧಿಸಲು ಹೊರಟಿರುವ ಈ ಸರಕಾರ ವಿರೋಧ ಪಕ್ಷಗಳ ಮೇಲೆ ಗದಾಪ್ರಹಾರ ಮಾಡುತ್ತಿದೆ. ಲೋಕಸಭೆ ಹಾಗೂ ರಾಜ್ಯಸಭೆಯ ಸಭಾಪತಿಗಳನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡು ವಿರೋಧ ಪಕ್ಷಗಳನ್ನು ನಿರ್ನಾಮ ಮಾಡಲು ಹೊರಟಿದ್ದಾರೆ. ಇವರ ಜನವಿರೋಧಿ ನೀತಿಗಳನ್ನು ಪ್ರಶ್ನೆ ಮಾಡಿದಾಗ ಹಿಂಬಾಗಿಲಿನಿಂದ ಕೇಂದ್ರದ ಬಿಜೆಪಿ ಸರಕಾರ ವಿರೋಧ ಪಕ್ಷದ ಉಭಯ ಸದನಗಳ ಸಂಸದರನ್ನು ಅಮಾನತ್ತುಗೊಳಿಸುವುದು, ಯಾವುದೇ ಒಂದು ಸಣ್ಣ ವಿಷಯಕ್ಕೆ ಅನರ್ಹಗೊಳಿಸುವ ಕೃತ್ಯಗಳಿಗೆ ಕೈಹಾಕಿರುವುದು ಈ ದೇಶದ ದುರಂತಗಳಲ್ಲಿ ಒಂದು. ದೇಶದ ಜನ ಇದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಮುಂದಿನ 2024ರ ಲೋಕಸಭಾ ಚುನಾವಣೆಯಲ್ಲಿ ಇವರಿಗೆ ತಕ್ಕಪಾಠ ಕಲಿಸಲಿದ್ದಾರೆ ಎಂದರು.




ಇವರು ಈ ದೇಶವನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡು ಜನವಿರೋಧಿ ನೀತಿಗಳ ಬಿಲ್‌ಗಳನ್ನು ಮಂಡಿಸಿ ಈ ದೇಶದ ಸಾಮರಸ್ಯಕ್ಕೆ ಧಕ್ಕೆ ತಂದೊಡ್ಡುವ ಪ್ರಯತ್ನ ಮಾಡುತ್ತಿದ್ದು, ಸರ್ವಾಧಿಕಾರಿ ರಾಜನಂತೆ ವರ್ತಿಸುತ್ತಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷ ಇವರ ಈ ನೀತಿಯನ್ನು ಜನರ ಮುಂದೆ ಕೊಂಡೊಯ್ದು ಇವರಿಗೆ ತಕ್ಕಪಾಠ ಕಲಿಸುತ್ತದೆ. ಇವರ ಈ ಸರ್ವಾಧಿಕಾರಿ ಧೋರಣೆಯನ್ನು ಬಲವಾಗಿ ಖಂಡಿಸುತ್ತೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕೆ.ಎಫ್. ಅಂಕಲಗಿ, ಆಜಾದ ಪಟೇಲ, ರಮೇಶ ಗುಬ್ಬೇವಾಡ, ಮಹ್ಮದರಫೀಕ ಟಪಾಲ, ಆರತಿ ಶಹಾಪೂರ, ಶಬ್ಬೀರ ಜಾಗೀರದಾರ, ಸಾಹೇಬಗೌಡ ಬಿರಾದಾರ ಮುಂತಾದವರು ಮಾತನಾಡಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾದ ಚಾಂದಸಾಬ ಗಡಗಲಾವ, ಡಾ.ಗಂಗಾಧರ ಸಂಬಣ್ಣಿ, ಚಂದ್ರಕಾಂತ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಸಾಹೇಬಗೌಡ ಬಿರಾದಾರ, ಕೆಪಿಸಿಸಿ ವಕ್ತಾರ ಎಸ್. ಎಂ. ಪಾಟೀಲ ಗಣಿಹಾರ, ಜಮೀರಅಹ್ಮದ ಬಕ್ಷಿ, ಮುಖಂಡ ಡಿ.ಎಲ್. ಚವ್ಹಾಣ, ಎನ್‌ಎಸ್‌ಯುಐ ಜಿಲ್ಲಾ ಅಧ್ಯಕ್ಷ ಅಮಿತ ಚವ್ಹಾಣ, ಮಹಾನಗರಪಾಲಿಕೆ ಸದಸ್ಯ ದಿನೇಶ ಹಳ್ಳಿ, ಅಂಗ ಘಟಕಗಳ ಅಧ್ಯಕ್ಷರಾದ ಕೃಷ್ಣಾ ಕಾಮಟೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊನಮಲ್ಲ ಸಾರವಾಡ, ಚನಬಸಪ್ಪ ನಂದರಗಿ, ಹಾಜಿಲಾಲ ದಳವಾಯಿ, ಸೈಯದ ಅಫ್ತಾಬ ಖಾದ್ರಿ, ಭಾರತಿ ಹೊಸಮನಿ, ಭಾರತಿ ನಾವಿ, ಮಂಜುಳಾ ಗಾಯಕವಾಡ, ಪಯಾಜ ಕಲಾದಗಿ, ಅಫ್ಜಲ್ ಜಾನವೆಕರ, ಶಂಕರಸಿಂಗ ಹಜೇರಿ, ಕನ್ನಾನ ಮುಶ್ರೀಫ್, ಆಸ್ಮಾ ಕಾಲೇಬಾಗ, ಸಂತೋಷ ಬಾಲಗಾಂವಿ, ಮೊಹಮ್ಮದ ಮುಲ್ಲಾ, ಮಂಜುಳಾ ಗಾಯಕವಾಡ, ಅಬುಬಕರ ಕಂಬಾಗಿ, ಲಾಲಸಾಬ ಕೊರಬು, ಮಹೆಬೂಬ ಮುಧೋಳ, ಸಲೀಮ ಕಲಾದಗಿ, ಮಹಾದೇವ ಜಾಧವ, ಪ್ರಿಯಾಂಕಾ ತೊರವಿ, ಡಿ.ಆರ್. ಸಂಕದ, ಬಾಬುಸಾಬ ಯಾಳವಾರ, ಶಮೀಮ ಅಕ್ಕಲಕೋಟ, ಇಲಿಯಾಸ ಅಹ್ಮದ ಸಿದ್ದಿಕಿ, ಸಿದ್ದು ಹಡಪದ, ಕೃಷ್ಣಾ ಲಮಾಣಿ, ಸುಂದರಪಾಲ, ಮಹಿಬೂಬಸಾಬ ಚೌಧರಿ, ಫಿರೋಜ ಶೇಖ, ಹಮಿದಾ ಪಟೇಲ, ಪರಶುರಾಮ ಹೊಸಮನಿ, ಗಿರೀಶ ಇಟ್ಟಂಗಿ, ರಜಾಕಸಾಬ ಕಾಖಂಡಕಿ, ದಸ್ತಗೀರ ಸಾಲೋಟಗಿ, ಪೀರಾ ಜಮಖಂಡಿ, ಮಂಜುನಾಥ ನಿಡೋಣಿ, ಜಹೀರಾ ಚೌಧರಿ, ಎ. ಎನ್. ಮನಗೂಳಿ ಮುಂತಾದವರು ಉಪಸ್ಥಿತರಿದ್ದರು.

# ಕಾನೂನಿನ ಮಹತ್ವ ಅರಿತುಕೊಳ್ಳಿ : ಮರ್ತೂರ



ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ವಿದ್ಯಾರ್ಥಿಗಳು ಪಠ್ಯದ ಅಧ್ಯಯನದೊಂದಿಗೆ ಕಾನೂನುಗಳ ಬಗ್ಗೆ ತಿಳಿದುಕೊಂಡು ತಮ್ಮ ಕುಟುಂಬ ಸದಸ್ಯರಿಗೆ ಹಾಗೂ ಇತರರಿಗೆ ಕಾನೂನಿನ ಮಹತ್ವ ತಿಳಿಸಿಕೊಡಬೇಕು ಎಂದು ವಕೀಲ ವಿ.ಬಿ.ಮರ್ತೂರ ಹೇಳಿದರು.

ಪಟ್ಟಣದ ಸಮೀಪವಿರುವ ಜೈನಾಪೂರ ಗ್ರಾಮದಲ್ಲಿ ಬುಧವಾರ ಪಟ್ಟಣದ ಬಸವೇಶ್ವರ ಸರ್ಕಾರಿ ಪದವಿ ಪೂರ್ವ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದ ಅಂಗವಾಗಿ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಸ್ತೆಯಲ್ಲಿ ಸಂಚರಿಸುವಾಗ ರಸ್ತೆ ನಿಯಮ ಪಾಲಿಸಬೇಕು. ಬೈಕ್ ಸವಾರಿ ಮಾಡುವ ವೇಳೆ ಹೆಲ್ಮೇಟ್ ಕಡ್ಡಾಯವಾಗಿ ಬಳಸುವುದು ಸೇರಿದಂತೆ ವಿವಿಧ ನಿಯಮಗಳನ್ನು ಅರಿತುಕೊಳ್ಳಬೇಕು ಎಂದು ಹೇಳಿದರು.

ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಎಸ್.ವಿ.ಅಗಸರ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಸ್ವಚ್ಛತೆ, ಪರಿಸರ, ಆರೋಗ್ಯದ ಮಹತ್ವ ಅರಿತುಕೊಂಡವರು ಭವಿಷ್ಯತ್ತಿನಲ್ಲಿ ನೆಮ್ಮದಿಯ ಜೀವನ ಸಾಗಿಸುತ್ತಾರೆ ಎಂದು ಹೇಳಿದರು.

ಮುಖಂಡ ಶಂಕ್ರೆಪ್ಪ ಉಳ್ಳಾಗಡ್ಡಿ ಅಧ್ಯಕ್ಷತೆ ವಹಿಸಿದ್ದರು.

ಹಣಮಂತ ಗೊಳಸಂಗಿ, ಮಲ್ಲು. ಎಸ್.ಗೊಳಸಂಗಿ, ಶಾಂತಪ್ಪ ಜಾಧವ, ಪರಶುರಾಮ ಹೊಸಮನಿ ಇದ್ದರು.

ರೇಖಾ ಪೂಜಾರಿ, ಸವಿತಾ ಪೂಜಾರಿ ಪ್ರಾರ್ಥನಾಗೀತೆ ಹಾಡಿದರು. ಉಪನ್ಯಾಸಕ ಚೇತನ ಬಾಗೇವಾಡಿ ಸ್ವಾಗತಿಸಿದರು. ಎಚ್.ಡಿ.ಬಿರಾದಾರ ವಂದಿಸಿದರು.

ಕಾರ್ಯಕ್ರಮಕ್ಕೂ ಮುನ್ನ ವಿದ್ಯಾರ್ಥಿಗಳು ಗ್ರಾಮದಲ್ಲಿ ಶ್ರಮದಾನದ ಮೂಲಕ ಸ್ವಚ್ಚತೆಯ ಮಹತ್ವ ಕುರಿತು ಜಾಗೃತಿ ಮೂಡಿಸಿದರು.

ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

## ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರಿಗೆ ಎಂಎಲ್ಸಿ ಸುನೀಲಗೌಡ ಪಾಟೀಲ ಮನವಿ

# ಪ್ರತಿ ಗ್ರಾಪಂಗೆ 100 ಮನೆ ಮಂಜೂರು ಮಾಡಿ

ಉದಯರಶ್ಮಿ ನ್ಯೂಸ್

ವಿಜಯಪುರ: ಪ್ರತಿಯೊಂದು ಗ್ರಾಮ ಪಂಚಾಯಿತಿಗಳಿಗೆ ತಲಾ 100 ಮನೆಗಳನ್ನು ಮಂಜೂರು ಮಾಡುವಂತೆ ವಸತಿ ಸಚಿವ ಬಿ.ಜಡ್. ಜಮೀರ್ ಅಹ್ಮದ್ ಖಾನ್ ಅವರಿಗೆ ಮನವಿ ಮಾಡಲಾಗಿದ್ದು, ಶೀಘ್ರದಲ್ಲಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಇತ್ತೀಚೆಗೆ ನಡೆದ ಬೆಳಗಾವಿ ಅಧಿವೇಶನದಲ್ಲಿ ನಾನಾ ವಸತಿ ಯೋಜನೆಗಳಡಿ ನಿರ್ಮಿಸಲಾದ ಮನೆಗಳ ಬಗ್ಗೆ ನಾನು ಚುಕ್ಕೆ ಗುರುತಿನ ಪ್ರಶ್ನೆ ಕೇಳಿದ್ದೆ. ಅಲ್ಲದೇ, ಚರ್ಚೆಯ ಸಂದರ್ಭದಲ್ಲಿ ಕಳೆದ ಐದು ವರ್ಷಗಳಲ್ಲಿ ಕೇವಲ 50 ಕ್ಕಿಂತ ಕಡಿಮೆ ಮನೆಗಳನ್ನು ನೀಡಲಾಗಿದೆ. ಅಲ್ಲದೇ, ವಸತಿ ರಹಿತರಿಗೆ ನಿವೇಶನ ನೀಡುವ ಕೆಲಸವಾಗಿಲ್ಲ ಎಂದು ಸಚಿವರ ಗಮನ ಸೆಳೆದಿದ್ದೆ. ಈ ಆರ್ಥಿಕ ವರ್ಷದಲ್ಲಿ ಕನಿಷ್ಠ ತಲಾ 100 ಮನೆಗಳನ್ನು ಪ್ರತಿಯೊಂದು ಗ್ರಾಮ ಪಂಚಾಯಿತಿಗಳಿಗೆ ಮಂಜೂರು ಮಾಡುವಂತೆ ಆಗ್ರಹಿಸಿದ್ದೆ. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಸಚಿವರು ಶೀಘ್ರವೇ ಗ್ರಾಮ ಪಂಚಾಯಿತಿಗಳಿಗೆ ಮನೆಗಳನ್ನು ಮಂಜೂರು ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ಸುನೀಲಗೌಡ ಪಾಟೀಲ ತಿಳಿಸಿದ್ದಾರೆ.



ನಾನು ವಿಧಾನ ಮಂಡಲದ ಅಧಿವೇಶನದಲ್ಲಿ ಗ್ರಾ.ಪಂ. ಸದಸ್ಯರ ಮಾಸಿಕ ಗೌರವಧನ ಹೆಚ್ಚಳ, ಉಚಿತ ಬಸ್ ಪಾಸ್, ಪಿಂಚಣಿ ಸೇರಿದಂತೆ ನಾನಾ ಬೇಡಿಕೆಗಳ ಕುರಿತು ಸದನದ ಒಳಗೆ ಮತ್ತು ಹೊರಗೆ ಸರಕಾರದ ಗಮನ ಸೆಳೆದಿದ್ದೇನೆ. ಇದರ ಪರಿಣಾಮ ಸರಕಾರ ಗ್ರಾ. ಪಂ. ಅಧ್ಯಕ್ಷರಿಗೆ ರೂ. 6000, ಉಪಾಧ್ಯಕ್ಷರಿಗೆ ರೂ. 4000 ಹಾಗೂ ಸದಸ್ಯರಿಗೆ ರೂ. 2000 ಗೌರವಧನ ನಿಗದಿ ಮಾಡಿದೆ. ಇನ್ನುಳಿದ ಬೇಡಿಕೆಗಳಾದ ಗ್ರಾ. ಪಂ. ಸದಸ್ಯರಿಗೆ ಉಚಿತ ಬಸ್ ಪಾಸ್, ಪಿಂಚಣಿ ಸೌಲಭ್ಯ, ಜೀವವಿಮೆ, ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಕೇರಳ ಮಾದರಿಯಲ್ಲಿ ಸರಕಾರಿ ಸೌಲಭ್ಯ ಒದಗಿಸುವಂತೆ ಸರಕಾರದ ಮೇಲೆ ಒತ್ತಡ ಹಾಕುತ್ತಿದ್ದೇನೆ.

ಸರಕಾರಿ ಶಾಲೆಗಳಲ್ಲಿ ಮೂಲಸೌಕರ್ಯ ಕೊರತೆ ಮತ್ತು ಶಿಥಿಲಗೊಂಡಿರುವ ಶಾಲಾ ಕಟ್ಟಡಗಳ ಕುರಿತು ಕೂಡ ವಿಧಾನ ಮಂಡಲದ ಒಳಗೆ ಮತ್ತು ಹೊರಗೆ ಸರಕಾರದ ಗಮನ ಸೆಳೆದು ಸೂಕ್ತ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೇನೆ.

ಅಷ್ಟೇ ಅಲ್ಲ, ನಾನಾ ವಸತಿ ಯೋಜನೆಗಳ ಕುರಿತೂ ಕೂಡ ಸರಕಾರದ ಗಮನ ಸೆಳೆದು ಸಕಾಲದಲ್ಲಿ ವಸತಿ ಯೋಜನೆಯ ಫಲಾನುಭವಿಗಳಿಗೆ ಹಣ ಪಾವತಿಸುವಂತೆ ಸರಕಾರದ ಮನವೊಲಿಸಿದ್ದೇನೆ. ಬೇರೆ ಬೇರೆ ಕಾರಣಗಳಿಂದ ಬ್ಲಾಕ್ (ತಡೆ ಹಿಡಿಯಲಾದ) ಮಾಡಲಾದ ಮನೆಗಳನ್ನು ಕಟ್ಟಿಕೊಳ್ಳಲು ಬ್ಲಾಕ್ ತೆರವುಗೊಳಿಸುವಂತೆ ನಾನು ಮಾಡಿದ ಪ್ರಯತ್ನ ಫಲ ನೀಡಿದ್ದು, ಈಗ ಬ್ಲಾಕ್ ತೆರವು ಮಾಡಲಾಗಿದೆ.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸಕಾಲಕ್ಕೆ ಕೂಲಿ ಪಾವತಿಸುವಂತೆಯೂ ಮನವಿ ಮಾಡಿದ್ದೇನೆ. 15ನೇ ಹಣಕಾಸು ಯೋಜನೆಯ ಹಣವನ್ನು ಗ್ರಾ.ಪಂ. ಗಳು ಬಳಕೆ ಮಾಡಲು ಅವಕಾಶ ನೀಡುವಂತೆ ಸರಕಾರವನ್ನು ಒತ್ತಾಯಿಸಿದ್ದೇನೆ. ಗ್ರಾ. ಪಂ. ಸಿಬ್ಬಂದಿಗೆ ಕನಿಷ್ಠ ವೇತನ, ತುಟ್ಟಿ ಭತ್ಯೆ ಸೇರಿದಂತೆ ಇತರ ಬೇಡಿಕೆಗಳನ್ನು ಈಡೇರಿಸಲು ಮತ್ತು ಸಕಾಲಕ್ಕೆ ವೇತನ ಪಾವತಿಸವಂತೆ ಸರಕಾರದ ಮೇಲೆ ಒತ್ತಡ ತಂದಿದ್ದೇನೆ. ಅಲ್ಲದೇ, ಗ್ರಾ. ಪಂ. ಸದಸ್ಯರ ಮತ್ತು ಗ್ರಾಮಗಳ ಅಭಿವೃದ್ಧಿಗೆ ಸದಾ ಬದ್ಧನಾಗಿದ್ದೇನೆ ಎಂದು ಸುನೀಲಗೌಡ ಪಾಟೀಲ ತಿಳಿಸಿದ್ದಾರೆ.

# ಅಧಿಕಾರಿಗಳ ಭರವಸೆ: ನಾಗರಬೆಟ್ಟ ರೈತರ ಧರಣಿ ಅಂತ್ಯ

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಪಟ್ಟಣದ ತಹಶೀಲ್ದಾರ ಕಚೇರಿಯ ಆವರಣದಲ್ಲಿ ವಿವಿಧ ಬೇಡಿಕೆಗಳನ್ನು ಮುಂದಿಟ್ಟು ನಾಗರಬೆಟ್ಟ ಗ್ರಾಮದ ರೈತರು ನಡೆಸುತ್ತಿದ್ದ ಧರಣಿ ಸತ್ಯಾಗ್ರಹ ಅಧಿಕಾರಿಗಳ ಭರವಸೆಯ ಮೇರೆಗೆ ಅಂತ್ಯಗೊಂಡಿದೆ.

ಧರಣಿ ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರ ಬಲರಾಮ ಕಟ್ಟಿಮನಿ ಧರಣಿ ನಿರತರಿಗೆ ಸದರಿ ಗುಡ್ಡಗಳ ಬಗ್ಗೆ ವಿಮರ್ಷಾತ್ಮಕ ವರದಿ ತರಿಸಿಕೊಂಡು ನಾಲ್ಕು ತಿಂಗಳೊಳಗಾಗಿ ಸೂಕ್ತ ಕ್ರಮ ಕೈಗೊಳ್ಳುವ ಭರವಸೆಯನ್ನ ನೀಡಿದರು. ತಹಶೀಲ್ದಾರರ ಭರವಸೆಯ ಮೇರೆಗೆ ಧರಣಿ ನಿರತರು ಧರಣಿಯನ್ನು ಅಂತ್ಯಗೊಳಿಸಿದರು.



ಈ ವೇಳೆ ತಾಲೂಕು ರೈತ ಹಿತರಕ್ಷಣಾ ವೇದಿಕೆಯ ಅಧ್ಯಕ್ಷ ಎಂ. ಎಸ್.ಸಿದರೆಡ್ಡಿ ಮಾತನಾಡಿ ತಹಶೀಲ್ದಾರ ಅವರು ನಮ್ಮ ಬೇಡಿಕೆಗಳಿಗೆ ಸೂಕ್ತ ಕ್ರಮ ವಹಿಸುವದಾಗಿ ತಿಳಿಸಿರುವುದರ ಪ್ರಯುಕ್ತ ಈ ಧರಣಿಯನ್ನು ಅಂತ್ಯಗೊಳಿಸುತ್ತಿದ್ದೇವೆ ಎಂದರು.

ಈ ವೇಳೆ ಗ್ಯಾನಪ್ಪ ರಕ್ಕಸಗಿ, ಶರಣಪ್ಪ ದಡ್ಡಿ, ಪರಮಪ್ಪ ಗುರಿಕಾರ, ಶಾಂತಗೌಡ ಸಿದರೆಡ್ಡಿ, ಹಣಮಂತ ಜಾಲಿಬೆಂಚಿ, ನಿಂಗಪ್ಪ ಹುರಿಕಾರ, ಬಸಪ್ಪ ಟಕ್ಕಳಕಿ, ನಿಂಗಪ್ಪ ರಕ್ಕಸಗಿ, ಕೆ.ಬಿ.ಮುರಾಳ, ಮಾಂತಯ್ಯ ಮಠ, ಶಂಕರಗೌಡ ಸಿದರೆಡ್ಡಿ, ಜುಮ್ಮಣ್ಣ ಟಕ್ಕಳಕಿ, ನಾನಾಗೌಡ ಸಿದರೆಡ್ಡಿ ಸೇರಿದಂತೆ ಮತ್ತೀತರರು ಇದ್ದರು.

# ಶ್ರೀಗಳಿಂದ ಪಾದಯಾತ್ರೆ ಮೂಲಕ ರುದ್ರಾಕ್ಷಿ ಧಾರಣೆ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಹಿರೇಮಠದ ಕಲ್ಯಾಣ ಮಂಟಪ ಲೋಕಾರ್ಪಣೆ, ನೂತನ ರಥೋತ್ಸವ, ಡಾ.ಜಗದ್ಗುರು ಡಾ.ಮಹಾಂತ ಶಿವಾಚಾರ್ಯ ಸ್ವಾಮೀಜಿ ಅವರ 11 ನೇ ಪುಣ್ಯಾರಾಧನೆ, 5008 ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ, 2008 ಕುಂಭ, 25 ಮಂಟಪ ಪೂಜೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಜ.3 ಮತ್ತು 4 ರಂದು ಹಮ್ಮಿಕೊಂಡ ಹಿನ್ನೆಲೆಯಲ್ಲಿ ಹಿರೇಮಠದ ಪೀಠಾಧಿಪತಿ ಅಭಿನವ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ ಅವರು ಗುರುವಾರ ಮನಗೂಳಿ ಪಟ್ಟಣದಲ್ಲಿ ಪಾದಯಾತ್ರೆ ಮಾಡುವ ಮೂಲಕ ದುಶ್ಚಟಗಳ ತ್ಯಜಿಸುವಂತೆ ಪ್ರತಿಯೊಬ್ಬರಿಗೆ ರುದ್ರಾಕ್ಷಿ ಧಾರಣೆ ಮಾಡಿ ಕಾರ್ಯಕ್ರಮದ ಜಾಗೃತಿಗೆ ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ಶ್ರೀಗಳು, 3 ಮತ್ತು 4 ರಂದು ಶ್ರೀಮಠದಿಂದ ಹಮ್ಮಿಕೊಂಡಿರುವ ಕಾರ್ಯಕ್ರಮದಂಗವಾಗಿ ಶ್ರೀಮಠದ ಭಕ್ತರಿರುವ 40 ಗ್ರಾಮಗಳಲ್ಲಿ ಪಾದಯಾತ್ರೆ ಮಾಡುವ ಜೊತೆಗೆ ಭಕ್ತರಿಗೆ ರುದ್ರಾಕ್ಷಿ ವಿತರಿಸುವ ಜೊತೆಗೆ ಯಾರೂ ದುಶ್ಚಟಗಳಿಗೆ ದಾಸರಾಗದೇ ಸನ್ಮಾರ್ಗ ಜೀವನವನ್ನು ತಮ್ಮದಾಗಿಸಿಕೊಳ್ಳಬೇಕೆಂದು ಹೇಳುವ ಜೊತೆಗೆ ಈ ಎರಡು ದಿನಗಳ ಕಾಲ ನಡೆಯುವ ಕಾರ್ಯಕ್ರಮಕ್ಕೆ ಎಲ್ಲರೂ ಬಂದು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ರಾಮು ಬಿರಾದಾರ, ಖಂಡುಬಾ ಘೋರ್ಪಡೆ, ರೇವಣಸಿದ್ದಪ್ಪ ಕಾಲದೀಪ, ಭೀಮಣ್ಣ ಔರಸಂಗ, ಮುದುಕಪ್ಪ ಮಣ್ಣೂರ, ಶೇಖಪ್ಪ ಬಿರಾದಾರ, ರೇವಣಸಿದ್ದ ತಪಶೆಟ್ಟಿ, ಶ್ರೀಶೈಲ ಬಿರಾದಾರ, ಪ್ರಕಾಶ ಕುಂಬಾರ, ಯಂಕಪ್ಪ ಬನ್ನೂರ, ಈರಪ್ಪ ಕಂಬಿ, ಮಾಂತಪ್ಪ ತೊನಿಶ್ಯಾಳ, ಬಸವರಾಜ ತಪಶೆಟ್ಟಿ, ಕೃಷ್ಣ ಬೂದಿಹಾಳ, ಮಡಿವಾಳಪ್ಪ ತೊನಿಶ್ಯಾಳ, ಶಿವಾನಂದ ಗುಜ್ಜಗೊಂಡ, ಶಿವಾಜಿ ಘೋರ್ಪಡೆ, ರಾಜು ಹುಣಸಿಕಟ್ಟಿ ಇತರರು ಇದ್ದರು.

# ಮರಗಮ್ಮದೇವಿ ದೇವಸ್ಥಾನ ಕಟ್ಟಡ ಉದ್ಘಾಟನೆ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ತಾಲೂಕಿನ ಮುಳ್ಳಾಳ ಗ್ರಾಮದಲ್ಲಿ ಮರಗಮ್ಮದೇವಿ ದೇವಸ್ಥಾನದ ನೂತನ ಕಟ್ಟಡ ಉದ್ಘಾಟನೆ ಶುಕ್ರವಾರ ನೆರವೇರಿತು. ಇಂಗಳೇಶ್ವರ ಬ್ರುಂಗೀಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಮರಗಮ್ಮದೇವಿ ಮೂರ್ತಿಗೆ ವಿಶೇಷ ಪೂಜೆ ನೆರವೇರಿಸಿ ಪ್ರಾಣ ಪ್ರತಿಷ್ಠಾಪನೆ ಮಾಡಿದ ನಂತರ ಮೂರ್ತಿಯನ್ನು ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಯಿತು.

ನಂದಿ ಸಕ್ಕರೆ ಕಾರ್ಖಾನೆಯ ನಿರ್ದೇಶಕ ಸತ್ಯಜೀತ ಪಾಟೀಲ ನೂತನ ದೇವಸ್ಥಾನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಳ್ಳಾಳ ಗ್ರಾಮ ಸಣ್ಣ ಗ್ರಾಮವಾದರೂ ಎಲ್ಲರೂ ಒಂದಾಗಿ ನೂತನ ದೇವಸ್ಥಾನವನ್ನು ನಿರ್ಮಾಣ ಮಾಡಿರುವುದು ಶ್ಲಾಘನೀಯ. ಇದು ಜನರ ಭಕ್ತಿಯ ಪ್ರತೀಕವಾಗಿದೆ. ಸರ್ಕಾರದ ನೆರವು ಪಡೆದುಕೊಂಡಿದ್ದರೂ ಎಲ್ಲರೂ ಕೂಡಿಕೊಂಡು ಅಚ್ಚುಕಟ್ಟಾಗಿ ಈ ಕಾರ್ಯ ಮಾಡಿರುವುದು ಮೆಚ್ಚುವಂತಹದ್ದು. ಆಧ್ಯಾತ್ಮದಿಂದ ನಾವೆಲ್ಲರೂ ನೆಮ್ಮದಿಯ ಜೀವನ ಸಾಗಿಸಬಹುದು ಎಂದರು.

ಅಧ್ಯಕ್ಷತೆ ವಹಿಸಿದ್ದ ವ್ಹಿಡಿಸಿಸಿ ಬ್ಯಾಂಕಿನ ನಿರ್ದೇಶಕ ಚಂದ್ರಶೇಖರ ಪಾಟೀಲ ಮಾತನಾಡಿ, ಈ ಗ್ರಾಮದಲ್ಲಿ ಎಲ್ಲರೂ ಅನೋನ್ಯವಾಗಿರುವದು ಒಳ್ಳೆಯದು. ಈ ದೇವಸ್ಥಾನ ನಿರ್ಮಾಣದಲ್ಲಿ ಎಲ್ಲರ ಪಾತ್ರವಿರುವುದನ್ನು ಕಾಣುತ್ತೇವೆ. ಮರಗಮ್ಮದೇವಿಯು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ ಎಂದು ಪ್ರಾರ್ಥಿಸುವುದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಡೋಣೂರ ಗ್ರಾಮ ಪಂಚಾಯಿತಿ ಅಧ್ಯಕ್ಷ ಚನ್ನಗೌಡ ಬಿರಾದಾರ, ಮುಖಂಡರಾದ ರಾಹುಲ ಕುಬಕಡ್ಡಿ, ರವಿ ಭಾವಿಕಟ್ಟಿ, ಸುರೇಶ ಹಾರಿವಾಳ, ಸಿದ್ದನಗೌಡ ಪಾಟೀಲ, ರಾಮನಗೌಡ ಪಾಟೀಲ, ವಸಂತ ಹಂಡಿ,ನಾಗಪ್ಪ ಕುಂಬಾರ, ಗ್ರಾಪಂ ಸದಸ್ಯರಾದ ರವಿ ವ್ಯಾಗೇರಿ, ಶಂಕ್ರೆಪ್ಪ ಹುಲ್ಲೂರ, ಅಬ್ದುಲ ಮುಲ್ಲಾ, ವಿಜಯಲಕ್ಷ್ಮೀ ಪಾಟೀಲ ಇತರರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಗ್ರಾಮದ ಯೋಧರನ್ನು ಸನ್ಮಾನಿಸಲಾಯಿತು.



# ಸಂಗಮೇಶ್ವರ ಕಾರ್ತಿಕೋತ್ಸವ: ಪುರವಂತರ ಪ್ರದರ್ಶನ



ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ತಾಲೂಕಿನ ಬಿದರಕುಂದಿ ಗ್ರಾಮದ ಆರಾಧ್ಯ ದೈವ ಶ್ರೀ ಸಂಗಮೇಶ್ವರರ ಕಾರ್ತಿಕೋತ್ಸವದ ನಿಮಿತ್ಯ ಅಂದಾಜು 45ಕ್ಕೂ ಹೆಚ್ಚು ಪುರವಂತರು ಕೈಗೆ, ನಾಲಿಗೆಗೆ, ಸೊಂಟಕ್ಕೆ ಶಸ್ತ್ರ ಹಾಕಿಕೊಂಡು ಪ್ರದರ್ಶನವನ್ನು ನೀಡಿದರು. ಪುರವಂತರಾದ ವೇದ ಮೂರ್ತಿ ಈರಣ್ಣ ಬಡಿಗೇರ, ದೇವಣ್ಣ ಪತ್ತಾರ(ಬಾವೂರ), ಸಂಗಣ್ಣ ಪತ್ತಾರ( ಧನ್ನೂರ), ಕಲ್ಲಯ್ಯ ಆಲೂರ, ರಂಗನಾಥ ಬಡಿಗೇರ, ಅನೀಲ ಪತ್ತಾರ, ನಾರಾಯಣ ಬಡಿಗೇರ, ಮೌನೇಶ ಬಡಿಗೇರ, ಈರಣ್ಣ ಮುದ್ದೇಬಿಹಾಳ, ಪ್ರಹ್ಲಾದ ಬಡಿಗೇರ, ಪ್ರಭು ಯರಗಲ್ಲ, ಪತ್ರಕರ್ತ ಹಾಗೂ ಪುರವಂತ ಬಸವರಾಜ ಈ ಕುಂಬಾರ(ಚವನಭಾವಿ), ಲಕ್ಷ್ಮಣ್ಣ ಕರಭಂಟನಾಳ, ಬಸಯ್ಯ ದಿಂಡವಾರ ಸೇರಿದಂತೆ ಮತ್ತೀತರರು ಇದ್ದರು.

# ಪೂರ್ವಭಾವಿ ಸಭೆ ನಾಳೆ

ಉದಯರಶ್ಮಿ ನ್ಯೂಸ್

ಚಡಚಣ: ತಾಲೂಕಿನ ಲೋಣಿ (ಬಿ. ಕೆ.) ಗ್ರಾಮದ ಶ್ರೀ ಸಿದ್ದೇಶ್ವರ ಶಿಕ್ಷಣ ಸಂಸ್ಥೆ ಸುವರ್ಣ ಮಹೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆ ಸಿದ್ದೇಶ್ವರ ಪ್ರೌಢಶಾಲೆಯಲ್ಲಿ ಪೂರ್ವಭಾವಿ ಸಭೆ ಡಿ.24 ರಂದು ಭಾನುವಾರ ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಬಿ ಎಂ ಕೋರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಮ್ಮ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ನಡೆಯುವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಅಧ್ಯಯನ ಮಾಡಿರುವ (1974–2023) ರವರೆಗಿನ ಎಲ್ಲಾ ಹಿರಿಯ ಹಾಗೂ ಹಳೆಯ ವಿದ್ಯಾರ್ಥಿಗಳು ತಮ್ಮ ಸಲಹೆ ಸೂಚನೆಗಳು ಮತ್ತು ಮಾರ್ಗದರ್ಶನ ನೀಡಿ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಬೇಕು ಎಂದು ಅವರು ಮನವಿ ಮಾಡಿಕೊಂಡಿದ್ದಾರೆ.

# ಹನುಮಮಾಲಾ ಪಾದುಕೆ ಪಲ್ಲಕ್ಕಿ ಉತ್ಸವ & ಶೋಭಾ ಯಾತ್ರೆ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ಪಟ್ಟಣದಲ್ಲಿ ವಿಶ್ವಹಿಂದೂ ಪರಿಷದ್, ಬಜರಂಗದಳದ ಸಹಯೋಗದಲ್ಲಿ ಶುಕ್ರವಾರ ಹನುಮಮಾಲಾ ಪಾದುಕೆ ಪಲ್ಲಕ್ಕಿ ಉತ್ಸವ ಹಾಗೂ ಮಾತೃಶಕ್ತಿ ದುರ್ಗಾವಾಹಿನಿಯ ವಾರ್ಷಿಕೋತ್ಸವದಂಗವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶೋಭಾ ಯಾತ್ರೆ ಜರುಗಿತು.

ಪಟ್ಟಣದ ಹನುಮಾನ ದೇವಸ್ಥಾನದಿಂದ ಆರಂಭಗೊಂಡ ಶೋಭಾ ಯಾತ್ರೆಯು ಅಗಸಿ, ಮಹಾರಾಜರ ಮಠ, ಬಸವಜನ್ಮ ಸ್ಮಾರಕ, ಪತ್ತಾರ ಗಲ್ಲಿ ಮಾರ್ಗವಾಗಿ ಬಸವೇಶ್ವರ ವೃತ್ತಕ್ಕೆ ಆಗಮಿಸಿತು. ಯಾತ್ರೆಯಲ್ಲಿ ಹನುಮಾನ, ರಾಮನ ಮೂರ್ತಿಗಳು, ಪೂಜ್ಯ ಸಿದ್ದೇಶ್ವರರ, ಭಾರತ ಮಾತೆಯ ಭಾವಚಿತ್ರ ಗಮನ ಸೆಳೆದವು. ಯಾತ್ರೆಯುದ್ದಕ್ಕೂ ಡಿಜೆ ಸೌಂಡಿಗೆ ಹನುಮಮಾಲಾಧಾರಿಗಳು ಕುಣಿದು ಕುಪ್ಪಳಿಸಿದರು.

ಶೋಭಾಯಾತ್ರೆಯಲ್ಲಿ ತಮ್ಮಣ್ಣ ಬಡಿಗೇರ, ನಿಂಗಪ್ಪ ಬಡಿಗೇರ, ಸಂತೋಷ ಹಿರೇಕುರಬರ, ಮಡ್ಡು ಈರಕಾರ, ಚನ್ನಬಸು ಮುರಾಳ, ರಾಹುಲ ಜಗತಾಪ, ಬಸವರಾಜ ಅಳ್ಳಗಿ, ಮಂಜು ಮುದೂರ, ಅಪ್ಪು ಚವ್ಹಾಣ, ಅಭಿಷೇಕ ಹೂಗಾರ, ಷಣ್ಮುಖ ಹಿರೇಮಠ, ಭಾಗ್ಯವಂತ ಇಂಗಳೇಶ್ವರ, ವಿಜಯ ಗೊಳಸಂಗಿ, ಸದಾನಂದ ಗೊಳಸಂಗಿ, ಬಸವರಾಜ ಗೊಳಸಂಗಿ, ಶಶಿಕುಮಾರ ನಾಯ್ಕೋಡಿ, ವಿರೇಶ ಹಿರೇಮಠ, ವಿದ್ಯಾಶ್ರೀ ಬಡಿಗೇರ, ಲಕ್ಷ್ಮೀ ವಸ್ತ್ರದ, ರೂಪಾ ಜಾಧವ, ರೂಪಾ ಒಡೆಯರ ಇತರರು ಭಾಗವಹಿಸಿದ್ದರು.

# ಮಂತ್ರಾಕ್ಷತೆಯ ಭವ್ಯಮೆರವಣಿಗೆ ಇಂದು

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಪಟ್ಟಣದ ಹುಡ್ಕೋದಲ್ಲಿನ ಹನುಮಾನ ದೇವಸ್ಥಾನದಿಂದ ಬಜಾರ ನ ಹನುಮಾನ ದೇವಸ್ಥಾನದವರೆಗೆ ಡಿ.23 ರಂದು ಬೆಳಿಗ್ಗೆ 10ಕ್ಕೆ ಅಯೋಧ್ಯೆಯಿಂದ ಬಂದಿರುವ ಪವಿತ್ರ ಮಂತ್ರಾಕ್ಷತೆಯ ಭವ್ಯ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀ ರಾಮನ ಜನ್ಮ ಭೂಮಿ ತೀರ್ಥಕ್ಷೇತ್ರ ಟ್ರಸ್ಟ ನ ವತಿಯಿಂದ ಹಮ್ಮಿಕೊಳ್ಳಲಾದ ಈ ಮೆರವಣಿಗೆಯಲ್ಲಿ ಸಮಸ್ತ ಹಿಂದೂ ಬಾಂಧವರು ಪಾಲ್ಗೊಳ್ಳುವಂತೆ ಪ್ರಕಟಣೆ ತಿಳಿಸಿದೆ.

# ಸಂಗೀತ ಕೇಳುವುದರಿಂದ ದಣಿವು ಮಾಯ



**ಉದಯರಶ್ಮಿ ನ್ಯೂಸ್**

ಮೋರಟಗಿ: ಸಂಗೀತದಲ್ಲಿ ಸ್ವರ್ಗ ಅಡಗಿದೆ. ಸಂಗೀತ ಬಲ್ಲವನು ಮಾನಸಿಕವಾಗಿ ಎಂದಿಗೂ ಕುಗ್ಗುವುದಿಲ್ಲ. ಸಂಗೀತ ಕೇಳುವುದ–ರಿಂದ ದಣಿವು ಮಾಯವಾಗುತ್ತದೆ ಎಂದು ಗಣಿತ ಭೋದಕ ಪರಶುರಾಮ ದೇಸುಣಗಿ ಹೇಳಿದರು.

ಗ್ರಾಮದ ಐಡಿಎಲ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡ ಸಂಗೀತ ಸೌರಭ ಸಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಯುವಕರು ಮೊಬೈಲ್ ಎಂಬ ಗಿಳಿಯ ಹಿಂದೆ ಬಿದ್ದು ಸುಂದರವಾದ ಬದುಕನ್ನೇ ಸರ್ವನಾಶ ಮಾಡಿಕೊಳ್ಳುತ್ತಿದ್ದಾರೆ. ತಮ್ಮ ಮಕ್ಕಳಿಗೆ ಶಾಲೆಗೆ ಕಳುಹಿಸಿಕೊಟ್ಟರೆ ಸಾಲದು ಮನೆಯಲ್ಲಿ ಅನಾವಶ್ಯಕ ಮೊಬೈಲ್ ಬಳಕೆ ಮಾಡಲು ಅನುಮತಿ ನೀಡಬಾರದು. ಮನೆಯೇ ಮೊದಲ ಪಾಠ ಶಾಲೆ ಎನ್ನುವಂತೆ ಪಾಲಕರು ಒಂದು ವೇಳೆ ಅನಕ್ಷರಸ್ತರಾಗಿದ್ದಲ್ಲಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿದರೆ ಖಂಡಿತ ತಮ್ಮ ಮಕ್ಕಳ ಭವಿಷ್ಯ ಉಜ್ವಲವಾಗುತ್ತದೆ ಎಂದರು.

ಶ್ರೀ ಭಾಗ್ಯವಂತಿ ಸಂಸ್ಕೃತಿಕ ನಾಟ್ಯ ಕಲಾ ತಂಡ ಮೋರಟಗಿ ಇವ–ರಿಂದ ವಿವಿಧ ರೀತಿಯ ಸಂಗೀತ ಹಾಡುವ ಮೂಲಕ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಹುಸೇನಭಾಷಾ ಬಾಗವಾನ, ಶ್ರೀ ಭಾಗ್ಯವಂತಿ ಸಾಂಸ್ಕೃತಿಕ ನಾಟ್ಯ ಕಲಾವಿದರ ಸಂಘದ ಮಾಲಿಕ ಭೀಮರಾಯ ಕಟ್ಟಿಮನಿ, ಶಿಕ್ಷಕರಾದ ಗುರುರಾಜ ನಡುವಿನಕೇರಿ, ಈರಣ್ಣ ವಿಶ್ವಕರ್ಮ, ಸೇರಿದಂತೆ ಕಲಾವಿದರ ತಂಡ, ವಿದ್ಯಾರ್ಥಿಗಳು ಹಾಗೂ ಶಾಲಾ ಸಿಬ್ಬಂದಿ ಇದ್ದರು.

# ವಿದ್ಯಾರ್ಥಿ ಜೀವನ ಬಂಗಾರದ ಜೀವನ :ಜಹಾಗೀರದಾರ

**ಉದಯರಶ್ಮಿ ನ್ಯೂಸ್**



ದೇವರಹಿಪ್ಪರಗಿ: ವಿದ್ಯಾರ್ಥಿ ಜೀವನ ಬಂಗಾರದ ಜೀವನ. ಪ್ರತಿಯೊಬ್ಬ ವಿದ್ಯಾರ್ಥಿ ತಮ್ಮ ಪದವಿ ಹಂತದಲ್ಲಿಯೇ ಉತ್ತಮ ಜೀವನ ರೂಪಿಸಿಕೊಳ್ಳಲು ಮುಂದಾಗಬೇಕು ಎಂದು ಸಿಂದಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ಉಪನ್ಯಾಸಕ ಆರ್.ಬಿ.ಜಹಾಗೀರದಾರ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಜರುಗಿದ ಪ್ರಥಮ ವರ್ಷದ ವಿದ್ಯಾರ್ಥಿಗಳ ಒಂದು ದಿನದ ಕಾರ್ಯಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿಯೊಬ್ಬ ವಿದ್ಯಾರ್ಥಿ ಕಾಲೇಜಿನಲ್ಲಿ ದೊರೆಯುವ ಸೌಲಭ್ಯಗಳನ್ನು ಸದುಪಯೋಗ ಪಡೆಸಿಕೊಂಡು ಜೀವನ ರೂಪಿಸಿಕೊಳ್ಳಬೇಕು ಎಂದರು.

ಕಾಲೇಜು ಪ್ರಾಂಶುಪಾಲ ಅಶೋಕ ಹೆಗಡೆ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ವಿದ್ಯಾರ್ಥಿಗಳು ಶಿಸ್ತು, ಸಂಸ್ಕಾರ, ಸಂಯಮ, ಸಂಸ್ಕೃತಿ ಮೈಗೂಡಿಸಿಕೊಂಡಿರಬೇಕು. ಗುರುಹಿರಿಯರಿಗೆ ಗೌರವ ಕೊಡುವಂತವರಾಗಿರಬೇಕು ಎಂದರು.

ದೈಹಿಕ ಶಿಕ್ಷಣ ನಿರ್ದೇಶಕ ಡಾ.ಅಶೋಕಕುಮಾರ್ ಜಾದವ ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯಾರ್ಥಿ ಜೀವನದ ಮಹತ್ವತೆ ಹಾಗೂ ರೂಪಿಸಿಕೊಳ್ಳಬೇಕಾದ ಬಗೆಗಳ ಕುರಿತು ಅಗತ್ಯ ಮಾಹಿತಿ ತಿಳಿಸಿದರು.

ಐಕ್ಯೂಎಸಿ ಸಂಚಾಲಕ ಶಿವಪುತ್ರ ಜಾಲವಾದಿ ವಿವಿಧ ವಿಭಾಗಗಳು ಮತ್ತು ಸಮಿತಿಗಳ ಕಾರ್ಯ ಚಟುವಟಿ–ಕೆಗಳ ಕುರಿತು, ಮುಖ್ಯ ಅಧಿಕ್ಷಕ ಜಗನ್ನಾಥ ಸಜ್ಜನ ಕಛೇರಿ ಮತ್ತು ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು,

ಡಾ. ದ್ರಾಕ್ಷಾಯಣಮ್ಮ ಎನ್.ಸಿ, ಅಕ್ರಮ ಪಾಷಾ, ಸಿಬ್ಬಂದಿ ರಾಜೇಶ್ವರಿ ಸುಗಂಧಿ, ಶಾರದಾ ಸೋಮಾಪುರ, ಮಂಜುನಾಥ ಮಾನೆ, ಅಬ್ದುಲ್ ಸತ್ತಾರ ಮಳಖೇಡ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ವ್ಯಕ್ತಿಯನ್ನು ಕಂಬಕ್ಕೆ ಕಟ್ಟಿ ಥಳಿಸಿದ ಪತ್ನಿ ಮನೆಯವರು!

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ವಿಚ್ಛೇದನಕ್ಕಾಗಿ ಕೋರ್ಟ್ ನ ಮೊರೆ ಹೋದ ವ್ಯಕ್ತಿಯನ್ನ ಮುದ್ದತಿಗೆ ಬಂದಾಗ ಪತ್ನಿಯ ಮನೆಯವರು ನ್ಯಾಯಾಲಯದ ಮುಖ್ಯದ್ವಾರದ ಹತ್ತಿರವಿರುವ ಕಂಬಕ್ಕೆ ಕಟ್ಟಿ ಥಳಿಸಿದ ಘಟನೆ ವರದಿಯಾಗಿದೆ.

ತಾಲೂಕಿನ ರೂಡಗಿ ಗ್ರಾಮದ ಮಹೇಶ ನಂದಿಹಾಳ ಹಲ್ಲೆಗೊಳಗಾದ ವ್ಯಕ್ತಿ. ಇದೇ ತಾಲೂಕಿನ ಗೋನಾಳ ಗ್ರಾಮದ ಬಸಪ್ಪ ಬಿರಾದಾರ ಇವರ ಮಗಳಾದ ಈರಮ್ಮಳ ಜೊತೆ ಕಳೆದ ಎರಡು ವರ್ಷಗಳ ಹಿಂದೆ ಹಿರಿಯರ ಸಮ್ಮುಖದಲ್ಲಿ ಮದುವೆಯಾಗಿತ್ತು. ಮದುವೆಯ ನಂತರ ಗಂಡ ಹೆಂಡಿರ ಸಂಬಂಧ ಅಷ್ಟೊಂದು ಚೆನ್ನಾಗಿ ಇರಲಿಲ್ಲ. ಪತ್ನಿಯ ಬಗ್ಗೆ ಅನೈತಿಕ ಸಂಬಂಧದ ಸಂಶಯ ಹೊಂದಿದ್ದ ಪತಿಗೆ ಮದುವೆಯ 2 ತಿಂಗಳಿಗೆ ಆಕೆ 7 ತಿಂಗಳ ಗರ್ಭಿಣಿ ಎಂದು ತಿಳಿದಿದ್ದು ಆಸ್ಪತ್ರೆಯಲ್ಲಿ. ಬಳಿಕ ತಾನು ಮೋಸ ಹೋಗಿದ್ದ ಬಗ್ಗೆ ತಿಳಿದು ಆಕೆಯನ್ನ ತವರು ಮನೆಗೆ ಕಳುಹಿಸಿದ್ದ.

ನಂತರ ನ್ಯಾಯಾಲಯದಲ್ಲಿ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದು ಆ ಮಗು ತನ್ನದಲ್ಲ ಎಂದು ಸಾಬೀತು ಮಾಡಲು ಡಿಎನ್ಎ ಪರೀಕ್ಷೆ ನಡೆಸುವಂತೆ ಪಟ್ಟು ಹಿಡಿದಿದ್ದ. ಮುದ್ದತಿಗೆ ಬಂದಾಗಲೊಮ್ಮೆ ಪತ್ನಿಯ ಮನೆಯವರೊಂದಿಗೆ ಮಾತಿನ ಚಕಮಕಿ ನಡೆಯುತ್ತಿದ್ದು ಈ ಬಾರಿ ವಿಕೋಪಕ್ಕೆ ತಿರುಗಿ ಈ ಘಟನೆ ನಡೆದಿದೆ ಎನ್ನಲಾಗಿದೆ.

ಘಟನೆಯ ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಪೊಲೀಸರು ಆಗಮಿಸಿ ಹಲ್ಲೆಗೊಳಗಾದವನನ್ನು ಆಸ್ಪತ್ರೆಗೆ ಸೇರಿಸಿ ಕಾನೂನು ಕ್ರಮ ಕೈಗೊಂಡಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆ ಬಳಿಕ ಮಹೇಶ ತನ್ನ ಪತ್ನಿಯ ಸಂಬಂಧಿಕರಾದ ಮುತ್ತಪ್ಪ ಬಸಪ್ಪ ಬಿರಾದಾರ, ಬಸಪ್ಪ ಭೀಮಪ್ಪ ಬಿರಾದಾರ, ಚನ್ನಮ್ಮ ಬಸಪ್ಪ ಬಿರಾದಾರ ಮತ್ತು ಪತ್ನಿ ಈರಮ್ಮಳ ಮೇಲೆ ದೂರು ನೀಡಿದ್ದಾನೆ. ಈ ಕುರಿತು ಇಲ್ಲಿನ ಪೊಲೀಸ್ ಠಾಣೆಯಲ್ಲಿ ಐಪಿಸಿ ಕಲಂ 323, 324 ,325, 341, 504, 506 ರೆ/ವು 34 ಗಳ ಅಡಿ ಪ್ರಕರಣ ದಾಖಲಾಗಿದೆ.

# ಗಣಿತವನ್ನು ವಿಶ್ವಕ್ಕೆ ಪರಿಚಯಿಸಿದ ರಾಮಾನುಜನ್



**ಉದಯರಶ್ಮಿ ನ್ಯೂಸ್**

ಆಲಮೇಲ: ಪಟ್ಟಣದ ಸರಕಾರಿ ಹೆಣ್ಣು ಮಕ್ಕಳ ಪ್ರೌಢಶಾಲೆ (ಖಂಖಂ)ಯಲ್ಲಿ ಶುಕ್ರವಾರ ಪ್ರಸಿದ್ಧ ಭಾರತೀಯ ಗಣಿತಶಾಸ್ತ್ರಜ್ಞ ಶ್ರೀನಿವಾಸ್ ರಾಮಾನುಜನ್ ರವರ ಜನ್ಮದಿನದ ಪ್ರಯುಕ್ತ ಅವರ ಭಾವಚಿತ್ರಕ್ಕೆ ಪೂಜೆಯ ಮೂಲಕ ಗೌರವ ಸಲ್ಲಿಸಲಾಯಿತು.

ಈ ಸಂದರ್ಭ ಕ್ಷೇತ್ರ ಶಿಕ್ಷಣಾಧಿಕಾರಿ ಆರೀಫ್ ಬಿರಾದಾರ ಮಾತನಾಡಿ, ರಾಮಾನುಜನರ ಬಾಲ್ಯ, ಜೀವನ, ಸಾಧನೆ ಹಾಗೂ ಅವರು ಗಣಿತಕ್ಕೆ ನೀಡಿದ ಕೊಡುಗೆ ಕುರಿತು ವಿವ–ರಿಸಿದರು.

ಗಣಿತದ ಪರಿಕಲ್ಪನೆಗಳು ಇಲ್ಲದೆ ವೈಜ್ಞಾನಿಕ ಆವಿಷ್ಕಾರಗಳು ಸಾಧ್ಯವಾಗುತ್ತಿರಲಿಲ್ಲ, ಗಣಿತವನ್ನು ಜಗತ್ತಿಗೆ ಪರಿಚಯಿಸಿದ್ದಕ್ಕಾಗಿ ನಾವು ಭಾರತೀಯರಿಗೆ ಋಣಿಯಾಗಿರಬೇಕು ಎಂದು ಹೇಳಿದ ಐನಸ್ಟೀನ್ ರ ಮಾತುಗಳನ್ನು ನೆನಪಿಸಿಕೊಂಡು ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಷಯದ ಆದೇಶನ ಕ್ರಿಯೆ, ಸಂಕಲನ ಕ್ರಿಯೆ, ಅಯಾನಿಕ್ ಸಂಂ–ಯುಕ್ತಗಳು ಮತ್ತು ಗಣಿತದ ಹಲವು ಪರಿಕಲ್ಪನೆಗಳನ್ನು ಉದಾಹರಣೆಗಳ ಮೂಲಕ ಎರಡು ಗಂಟೆಯ ಕಾಲ ವಿದ್ಯಾರ್ಥಿಗಳಿಗೆ ವಿವರಿಸಿದರು.

ಎಸ್.ಎಸ್.ಎಲ್.ಸಿ ಯಲ್ಲಿ 625 ಅಂಕ ಗಳಿಸಲು ಹೇಗೆ ಅಧ್ಯಯನ ಮಾಡಬೇಕು ಮತ್ತು ಎಸ್.ಎಸ್.ಎಲ್.ಸಿ ನಂತರ ವಿಜ್ಞಾನ ವಿಭಾಗಕ್ಕೆ ಹೆಚ್ಚಿನ ಒಲವು ತೋರಿಸಬೇಕು ಎಂದು ಪ್ರೇರೇಪಿಸಿದರು.

ಸರಕಾರಿ ಪ್ರೌಢ ಶಾಲಾ ಮುಖ್ಯೋಪಾಧ್ಯಾಯ ಹಾಗೂ ಜಿಲ್ಲಾ ಮಟ್ಟದ ಆದರ್ಶ ಶಿಕ್ಷಕ ರವಿ.ವಿ.ಹೊಸಮನಿ, ಬಿ.ಆರ್.ಪಿ ಪಿರೋಜ್ ಕಾಚೂರ, ಶಿಕ್ಷಕರಾದ ಎಂ. ವೈ.ಉಪ್ಪಾರ, ಎಸ್.ಎಂ. ಕಾಗರ, ಶ್ರೀಮತಿ ಎ.ಸಿ. ಶೇಖ ಮತ್ತು ಸಿ.ಆರ್‌ಪಿ. ಗುಲಾಬನದಾಪ್, ಶ್ರೀಮತಿ ರಾಜೇಶ್ವರಿ ಬಿರಾದಾರ, ಹೊನ್ನಮ್ಮರು ಹಾಗೂ ಅಪಾರ ವಿದ್ಯಾರ್ಥಿಗಳಿದ್ದರು.

# ತಾಜಪೂರ: ರೈತ ಸಂವಾದ ಇಂದು

**ಉದಯರಶ್ಮಿ ನ್ಯೂಸ್**

ವಿಜಯಪುರ: ಕರ್ನಾಟಕ ರೈತ ಜಾಗೃತ ವೇದಿಕೆ ತಾಜಪೂರ ಎಚ್ ಹಾಗೂ ಜಿಲ್ಲಾ ಜಲ ಬಿರಾದರಿ ಇವರ ಸಂಯುಕ್ತಾಶ್ರಯದಲ್ಲಿ ತಾಲೂಕಾ ಮಟ್ಟದ ರೈತ ಸಂವಾದ ಕಾರ್ಯಕ್ರಮವನ್ನು ಶನಿವಾರ ಡಿ.23ರಂದು ಸಾಯಂಕಾಲ 4.00 ಗಂಟೆಗೆ ತಾಜಪೂರ ಎಚ್. ಗ್ರಾಮ ಪಂಚಾಯತ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನವದೆಹಲಿಯ ವಿಶ್ವ ಜಲ ಪುರುಷ ಪ್ರಶಸ್ತಿ ಪುರಸ್ಕೃತ ರಾಜೇಂದ್ರ ಸಿಂಗ್ ರವರು ವಹಿಸುವರು. ಮುಖ್ಯ ಅತಿಥಿಗಳಾಗಿ ಭಾರತ ಸರಕಾರದ ಕೃಷಿ ಮಂತ್ರಾಲಯದ ಅಧಿಕಾರಿ ಅಶೋಕ ದಳವಾಯಿ, ವಿಧಾನಪರಿಷತ್ ಸದಸ್ಯ ಸುನೀಲಗೌಡ ಪಾಟೀಲ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಉಪನ್ಯಾಸಕ ಡಾ.ರಾಜೇಂದ್ರ ಪೋತದಾರ, ಜಿಲ್ಲಾ ಜಲ ಬಿರಾದರಿ ಅಧ್ಯಕ್ಷ ಫೀಟರ್ ಅಲೆಕ್ಸಾಂಡರ್, ಅಮ್ಮನ ಮಡಿಲು ಚಾ–ರಿಟೇಬಲ್ ಟ್ರಸ್ಟ್ ಅಧ್ಯಕ್ಷ ಸಂಗಮೇಶ ಬಬಲೇಶ್ವರ ವಹಿಸುವರು.

ಈ ಕಾರ್ಯಕ್ರಮದಲ್ಲಿ ರೈತರು ಬೆಳೆಯುವ ಬೆಳೆಗೆ ಪರಿಹಾರ, ಔಷಧಿ ಸಂಪರಣೆ, ಆರ್ಥಿಕ ಲಾಭ ಕೊಡುವ ಬೆಳೆಗಳನ್ನು ಹೇಗೆ ಬೆಳೆಯುವುದು? ರೈತರ ಆರ್ಥಿಕ ಮಟ್ಟ ಸುಧಾರಣೆ, ನೀರಿನ ಸದ್ಭಳಕೆ ಹೇಗೆ ಮಾಡುವದು? ಇನ್ನು ಹಲವಾರು ವಿಷಯಗಳ ಕುರಿತು ಮುಕ್ತವಾದ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಕಾರಣ ಈ ಕಾರ್ಯಕ್ರಮದ ಬಬಲೇಶ್ವರ –ತಿಕೋಟಾ ತಾಲೂಕಿನ ಎಲ್ಲ ರೈತ ಬಾಂಧವರು, ಭಾಗವಹಿಸಿ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬೇಕೆಂದು ಕರ್ನಾಟಕ ರೈತ ಜಾಗೃತಿ ವೇದಿಕೆಯ ಅಧ್ಯಕ್ಷ ಆರ್.ಜಿ. ಯರನಾಳ ಹಾಗೂ ಪ್ರಗತಿಪರ ರೈತರಾದ ಮೆಹಬೂಬ ಮಾಲಬಾವಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಜಯಪುರದಾದ್ಯಂತ ಮಿಂಚಿನ ಸಂಚಾರ ನಡೆಸಿದ ಜಿಲ್ಲಾಧಿಕಾರಿ ಟಿ.ಭೂಬಾಲನ್

# ಸ್ವಚ್ಛತೆ ಸೇರಿದಂತೆ ವ್ಯವಸ್ಥೆ ಸುಧಾರಣೆಗೆ ಕಟ್ಟುನಿಟ್ಟಿನ ಸೂಚನೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಶುಕ್ರವಾರ ವಿಜಯಪುರ ನಗರದ ವಿವಿಧೆಡೆ ಮಿಂಚಿನ ಸಂಚಾರ ನಡೆಸಿ, ಸ್ವಚ್ಛತೆ ಹಾಗೂ ವ್ಯವಸ್ಥೆ ಸುಧಾರಣೆ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗದಲ್ಲಿರುವ ಕಣಕಿ ಬಜಾರ್ ಪ್ರದೇಶದಿಂದ ಸಂಚಾರ ಆರಂಭಿಸಿದ ಜಿಲ್ಲಾಧಿಕಾರಿಗಳು, ಕಣಕಿ ಬಜಾರ್ ಪ್ರದೇಶಕ್ಕೆ ಭೇಟಿ ನೀಡಿ, ಕಸ–ಕಂಟಿಗಳನ್ನು ಬೆಳೆದಿರುವ ಕುರಿತು ಗಮನಿಸಿದ ಅವರು, ಕೂಡಲೇ ಮುಳ್ಳು–ಕಂಟಿಗಳನ್ನು ತೆರವುಗೊಳಿಸಿ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಭಾರತೀಯ ಪುರಾತತ್ವ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಣಕಿ ಬಜಾರ್ ಪ್ರದೇಶಲ್ಲಿ ತಾತ್ಕಾಲಿಕವಾಗಿ ವಾಹನಗಳ ನಿಲುಗಡೆ ವ್ಯವಸ್ಥೆ ಕೈಗೊಳ್ಳಲು ಪರಿಶೀಲನೆ ನಡೆಸಿ ಸೂಕ್ತ ವರದಿ ಸಲ್ಲಿಸುವಂತೆ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಕೇಂದ್ರ ಬಸ್ ನಿಲ್ದಾಣಕ್ಕೆ ಭೇಟಿ ನೀಡಿದ ಅವರು, ನಿಲ್ದಾಣದ ಆವರಣ ಸೇರಿದಂತೆ ಒಳಭಾಗವನ್ನು ವೀಕ್ಷಣೆ ಮಾಡಿದ ಅವರು, ಪ್ಲಾಟಫಾರಂಗಳಲ್ಲಿ ಸೂಕ್ತ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ವಿವಿಧೆಡೆಯಿಂದ ಆಗಮಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಫ್ಲಾಟ್‌ಫಾರಂನಲ್ಲಿಯೇ ಕೂಡಲೇ ಪ್ರತ್ಯೇಕವಾಗಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಹ್ಯಾಂಡ್‌ವಾಶ್‌ಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವಂತೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಂತರ ಕೇಂದ್ರ ಬಸ್ ನಿಲ್ದಾಣದ ಮುಂಭಾಗದಲ್ಲಿರುವ ಗಾರ್ಡ್ನ ವ್ಯವಸ್ಥೆ ಪರಿಶೀಲನೆ ನಡೆಸಿದ ಅವರು, ಸರಿಯಾದ ನಿರ್ವಹಣೆ ಇಲ್ಲದೇ ಗಾರ್ಡನ್‌ನಲ್ಲಿ ಎಲ್ಲೆಂದರಲ್ಲಿ ಕಸಕಡ್ಡಿ ಬೆಳೆದಿರುವುದನ್ನು ವೀಕ್ಷಿಸಿದ ಜಿಲ್ಲಾಧಿಕಾರಿಗಳು, ನಿಲ್ದಾಣದಲ್ಲಿರುವ ಗಾರ್ಡನ್‌ನ್ನು ಸ್ವಚ್ಛಗೊಳಿಸಿ ಉತ್ತಮವಾಗಿ ನಿರ್ವಹಣೆ ಮಾಡುವಂತೆ ಸೂಚನೆ ನೀಡಿದರು.

ಬಸ್ ನಿಲ್ದಾಣದ ಮಧ್ಯಭಾಗದಲ್ಲಿರುವ ಒಳಚರಂಡಿ ಹಾಗೂ ಕೇಂದ್ರ ಬಸ್ ನಿಲ್ದಾಣದಲ್ಲಿರುವ ಶೌಚಾಲಯಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಪ್ರಯಾಣಿಕರ ಅನುಕೂಲಕ್ಕಾಗಿ ನಿಲ್ದಾಣದ ಎಲ್ಲ ದಿಕ್ಕಿನಲ್ಲಿ ಶೌಚಾಲಯ ಹೊಂದಿರುವ ಮಾಹಿತಿ ಫಲಕಗಳನ್ನು ಅಳವಡಿಸುವಂತೆ ಅವರು ಸೂಚನೆ ನೀಡಿದರು.

ಕೇಂದ್ರ ಬಸ್ ನಿಲ್ದಾಣದಲ್ಲಿ ಮಹಾನಗರ ಪಾಲಿಕೆಯಿಂದ ಹೊಸದಾಗಿ ಇಂದಿರಾ ಕ್ಯಾಂಟಿನ ಹಾಗೂ ಹೈಟೆಕ್ ಶೌಚಾಲಯ ನಿರ್ಮಾಣಕ್ಕೆ ಕೆಕೆಆರ್‌ಟಿಸಿಯಿಂದ ಸೂಕ್ತ ಜಾಗ ಪಡೆದು ಕ್ರಮ ಕೈಗೊಳ್ಳುವಂತೆ ಮಹಾನಗರ ಪಾಲಿಕೆ ಆಯುಕ್ತರಿಗೆ ಸೂಚಿಸಿದರು.

ವಿಜಯಪುರ ಗಾಂಧಿವೃತ್ತದಲ್ಲಿರುವ ಹಳೆಯ ನಗರ ಕೇಂದ್ರ ಗ್ರಂಥಾಲಯ ಆವರಣಕ್ಕೆ ಭೇಟಿ ನೀಡಿದ ಅವರು, ಕಂಪೌಂಡ್ ಗೋಡೆ ದುರಸ್ತಿಗೊಳಿಸದೇ ಹೊಸದಾಗಿ ಕಂಪೌಂಡ್ ಗೋಡೆ ನಿರ್ಮಾಣ ಮಾಡಬೇಕು. ಗ್ರಂಥ–ಾಲಯದಲ್ಲಿ ಪೀಠೋಪಕರಣ ಅಳವಡಿಸಲು ಗ್ರಂಥಾಲಯ ಅಧಿಕಾ–ರಿಗಳಿಗೆ ಸೂಚನೆ ನೀಡಿದರು.





ಶಾಸ್ತ್ರೀ ಮಾರುಕಟ್ಟೆ ಹಾಗೂ ನೆಹರು ಮಾರುಕಟ್ಟೆಗೆ ಭೇಟಿ ನೀಡಿದ ಅವರು, ನೆಹರು ಮಾರುಕಟ್ಟೆ ಒಳಾಂಗಣ ಪ್ರದೇಶದಲ್ಲಿ ವ್ಯಾಪಾರಸ್ಥರು ಈ ಹಿಂದೆ ಗುರುತಿಸಿರುವ ಮಾರುಕಟ್ಟೆ ಸ್ಥಳದಲ್ಲಿ ವ್ಯಾಪಾರ ನಡೆಸಬೇಕು. ತರಕಾರಿ ವ್ಯಾಪಾರಸ್ಥರಿಗೆ ನೆಹರು ಮಾರುಕಟ್ಟೆ ಪಕ್ಕದಲ್ಲಿರುವ ಆವರಣ, ಜನತಾ ಬಜಾರ ಹತ್ತಿರವಿರುವ ಖಾಲಿ ಜಾಗೆಯಲ್ಲಿ ಬೀದಿ ವ್ಯಾಪಾರಸ್ಥರಿಗೆ ವ್ಯಾಪಾರ ಮಾಡಲು ಅವಕಾಶ ಕಲ್ಪಿಸಲು ಪಾಲಿಕೆಯಿಂದ ಪರಿವೀಕ್ಷಣೆ ನಡೆಸಿ ಸವಿಸ್ತಾರವಾದ ವರದಿ ಹಾಗೂ ನಕ್ಷೆಯನ್ನು ಸಲ್ಲಿಸುವಂತೆ ಮಹಾನಗರ ಪಾಲಿಕೆ ಆಯುಕ್ತರಿಗೆ ಸೂಚನೆ ನೀಡಿದರು.

ಲಾಲಬಹಾದ್ದೂರ ಶಾಸ್ತ್ರೀ ಮಾರುಕಟ್ಟೆಗೆ ಭೇಟಿ ನೀಡಿ ವೀಕ್ಷಣೆ ನಡೆಸಿ, ಮಾರುಕಟ್ಟೆ ಒಳಗಡೆ ದ್ವಾರದಲ್ಲಿ ಅಳವಡಿಸಿದ ಗ್ರಿಲ್‌ಗಳನ್ನು ದುರಸ್ತಿಗೊಳಿಸುವಂತೆ ತಿಳಿಸಿದ ಅವರು, ನಂತರ ನಗರದ ವಾಜಪೇಯಿ ರಸ್ತೆ, ಕಿರಾಣಾ ಮಾರುಕಟ್ಟೆ, ಕಾಬ್ರಾಜಿ ಬಜಾರ, ಸರಾಫ್ ಬಜಾರ, ಸಿದ್ದೇಶ್ವರ ರಸ್ತೆ, ಲಿಂಗದಗುಡಿ ರಸ್ತೆ, ಎಪಿಎಂಸಿ ರಸ್ತೆ, ಎಲ್ಲ ಮಾರ್ಗಗಳಲ್ಲಿ ಸಂಚ–ರಿಸಿದ ಅವರು, ದ್ವಿಚಕ್ರ ಹಾಗೂ ನಾಲ್ಕುಚಕ್ರ ವಾಹನ ನಿಲುಗಡೆ ಮತ್ತು ಬೀದಿ ವ್ಯಾಪಾರಸ್ಥರಿಗೆ ಸೂಕ್ತ ಜಾಗವನ್ನು ಗುರುತಿಸಿ ಅನುಕೂಲ ಕಲ್ಪಿಸಿಕೊಡಬೇಕು. ಈ ಪ್ರದೇಶದಲ್ಲಿನ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದ ಪಾಲಿಕೆ ಆರೋಗ್ಯ ಮೇಲ್ವಿಚಾರಕರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ನಂತರ ಚಾಬುಕಸವಾರ ದರ್ಗಾ ಹತ್ತಿರುವಿರುವ ಖಾಸಗಿ ಜಮೀನಿನಲ್ಲಿರುವ ಪುರಾತನ ಕಾಲದ ತೆರೆದ ಬಾವಿಯನ್ನು ವೀಕ್ಷಿಸಿದ ಅವರು, ಪುರಾತನ ಕಾಲದ ತೆರೆದ ಬಾವಿ ಪುನಶ್ಚೇತನ ಕುರಿತು ಸೂಕ್ತ ಕ್ರೀಯಾಯೋಜನೆ ಸಿದ್ಧಪಡಿಸುವಂತೆ ನಗರಾಭಿವೃದ್ದಿ ಪ್ರಾಧಿಕಾರಕ್ಕೆ ಸೂಚಿಸಿದ ಅವರು, ಶಾಂತಿನಿಕೇತನ ಕಾಲೇಜ್ ಮುಂಭಾಗದಲ್ಲಿರುವ ಮಹಾನಗರ ಪಾಲಿಕೆ ವ್ಯಾಪ್ತಿಯ ಒಂದು ಎಕರೆ ವಿಸ್ತೀರ್ಣದಲ್ಲಿರುವ ತೆರೆದ ಪುರಾತನ ಭಾವಿಯನ್ನು ಪರಿಶೀಲನೆ ನಡೆಸಿದ ಅವರು, ಈ ಕುರಿತು ಸಹ ದಾಖಲೆಗಳನ್ನು ಸಂಗ್ರಹಿಸಿ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳುವಂತೆ ಮಹಾನಗರ ಪಾಲಿಕೆ ಹಾಗೂ ನಗರಾಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದರು.

ಇಂಡಿ ರಸ್ತೆಯಲ್ಲಿರುವ ಪಾಲಿಕೆಯ ಒಳಚರಂಡಿ ಶುದ್ಧೀಕರಣ ಘಟಕ ನಿರ್ಮಾಣ ಕಾಮಗಾರಿಯನ್ನು ವೀಕ್ಷಿಸಿದ ಅವರು, ಕಾಮಗಾರಿಯನ್ನು ಪೂರ್ಣಗೊಳಿಸಿ ವೈಜ್ಞಾನಿಕವಾಗಿ ಶುದ್ಧೀಕರಣ ಮಾಡುವ ಬಗ್ಗೆ ಕೂಡಲೇ ಕ್ರೀಯಾಯೋಜನೆ ಸಿದ್ಧಪಡಿಸಲು ಮಹಾನಗರ ಪಾಲಿಕೆಯ ಅಧೀಕ್ಷಕ ಅಭಿಯಂತರಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಆಯುಕ್ತ ಬದ್ರೂದ್ದಿನ ಸೌದಾಗರ, ನಗರಾಭಿವೃದ್ದಿ ಪ್ರಾಧಿಕಾರದ ಆಯುಕ್ತ ರಾಜಶೇಖರ ಡಂಬಳ, ಪಾಲಿಕೆ ಅಧೀಕ್ಷಕ ಅಭಿಯಂತರ ವಿ.ಎಂ. ಹಿರೇಮಠ, ಪಾಲಿಕೆಯ ನಿರೀಕ್ಷಕರು, ಮೇಲ್ವಿಚಾರಕು, ನಗರಾಭಿವೃದ್ಧಿ ಪ್ರಾಧಿಕಾರದ ಅಭಿಯಂತರರು ಉಪಸ್ಥಿತರಿದ್ದರು

# ಮುಖ್ಯ ರಸ್ತೆಯಲ್ಲಿ ಚರಂಡಿ ನೀರು :ಅಧಿಕಾರಿಗಳಿಗೆ ಹಿಡಿಶಾಪ

**ಉದಯರಶ್ಮಿ ನ್ಯೂಸ್**



ಮುದ್ದೇಬಿಹಾಳ: ಪಟ್ಟಣದ ಬಜಾರ ಮುಖ್ಯ ರಸ್ತೆಯಲ್ಲಿರುವ ಡ್ರೈನೇಜ್ ಸಂತೆಯ ದಿನವಾದ ಗುರುವಾರ ಓವರ್ ಫ್ಲೋ ಆಗಿ ದಾರಿಯುದ್ದಕ್ಕೂ ಹರಿದು ಸಾಕಷ್ಟು ತಾಪತ್ರೆಯ ತಂದೊಡ್ಡಿ ಸಂತೆಗೆ ಬಂದ ಜನ ಮೂಗು ಮುಚ್ಚಿಕೊಂಡೇ ತಿರುಗಾಡುತ್ತ ಅಧಿಕಾರಿಗಳಿಗೆ ಹಿಡಿಶಾಪ ಹಾಕಿದರು.

ಮದ್ಯಾಹ್ನ 3ಗಂಟೆಗೆ ಈ ಸಮಸ್ಯೆ ತಲೆದೋರಿದ್ದು ಚಿಕ್ಕ ಮಕ್ಕಳು, ವಿದ್ಯಾರ್ಥಿಗಳು, ವಯೋವೃದ್ಧರು ತುಳಿಕೊಂಡೇ ತಿರುಗಾಡುವ ಅನಿವಾರ್ಯತೆ ಎದುರಾಗಿತ್ತು.

ಈ ವೇಳೆ ಪಟ್ಟಣದ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ವಾಸುದೇವ ಶಾಸ್ತ್ರಿ ಮಾತನಾಡಿ, ನಮಗೆ ಈ ಸಮಸ್ಯೆ ಹೊಸದೇನೂ ಅಲ್ಲ. ಮೇಲಿಂದ ಮೇಲೆ ಮರುಕಳಿಸುತ್ತಲೇ ಇರುತ್ತೆ. ಈ ಬಗ್ಗೆ ಎಷ್ಟು ದೂರಿದರೂ ಯಾವುದೇ ಕ್ರಮವಾಗುತ್ತಿಲ್ಲ. ಒಳಚರಂಡಿ ಇಲಾಖೆಯವರಿಗೆ ದೂರಿದರೆ ಪುರಸಭೆಯವರ ಮೇಲೆ ಹಾಕುತ್ತಾರೆ. ಪುರಸಭೆಯವರಿಗೆ ತಿಳಿಸಿದರೆ ಒಳಚರಂಡಿ ಇಲಾಖೆಯತ್ತ ಬೆರಳು ತೋರಿಸುತ್ತಾರೆ. ಹೀಗಾದರೆ ಇದಕ್ಕೆ ಶಾಶ್ವತ ಪರಿಹಾರ ಯಾವಾಗ ಎಂಬ ಬಗ್ಗೆ ದೊಡ್ಡ ಚಿಂತೆ ನಮಗೆ ಕಾಡುತ್ತಿದೆ. ಚೇಂಬರ್ ನಿಂದ ಕೊಳಕು ನೀರು ಹೊರಬರುತ್ತಿದ್ದಂತೆಯೇ ರಸ್ತೆಯುದ್ದಕ್ಕೂ ಹರಿಯುತ್ತದೆ. ಇದರಿಂದ ಗಬ್ಬು ವಾಸನೆ ಅಲ್ಲದೇ ಇದರಿಂದ ಸಾಂಕ್ರಾಮಿಕ ರೋಗ ಹರಡುತ್ತದೆ. ಇದಕ್ಕೊಂದು ಶಾಶ್ವತ ಪರಿಹಾರದ ಅವಶ್ಯಕತೆ ಅತೀ ಅವಶ್ಯ. ಜಿಲ್ಲಾಧಿಕಾರಿಗಳು ಕೂಡಲೇ ಈ ಸಮಸ್ಯೆಗೊಂದು ಶಾಶ್ವತ ಪರಿಹಾರ ಕಲ್ಪಿಸಲು ಕ್ರಮ ಕೈಗೊಳ್ಳಬೇಕು ಎಂದರು.

ಇಂಥದ್ದೇ ಸಮಸ್ಯೆಯನ್ನು ಪಟ್ಟಣದ ವಿದ್ಯಾನಗರದ ನಿವಾಸಿಗಳೂ ಅನುಭವಿಸುತ್ತಿದ್ದು, ಮುಖ್ಯ ರಸ್ತೆಯ ಚೇಂಬರೊಂದು ತುಂಬಿ ಓವರ್ ಫ್ಲೋ ಆಗಿರುವ ಸಮಸ್ಯೆ ತಂದೊಡ್ಡಿದೆ ಎಂದು ದೂರಿದ್ದಾರೆ. ಮೇಲಿಂದ ಮೇಲೆ ಇಲ್ಲೂ ಈ ಸಮಸ್ಯೆಯಾಗುತ್ತಿದ್ದು ಶಾಶ್ವತ ಪರಿಹಾರಕ್ಕೆ ಎದುರು ನೋಡುತ್ತಿದ್ದಾರೆ.

# ಸ್ವಯಂ-ಕಲಿಕೆಯ ಗಣಿತ ಶಾಸ್ತ್ರಜ್ಞ ರಾಮಾನುಜನ್

**ಉದಯರಶ್ಮಿ ನ್ಯೂಸ್**



ತಿಕೋಟಾ: ರಾಮಾನುಜನ್ ಅವರು ಸ್ವಯಂ-ಕಲಿಕೆಯ ಗಣಿತಶಾಸ್ತ್ರಜ್ಞರಾಗಿದ್ದು, ಅವರು ಸಂಖ್ಯೆ ಸಿದ್ಧಾಂತ, ಅನಂತ ಸರಣಿಗಳು ಮತ್ತು ವಿಶೇಷ ಕಾರ್ಯಗಳನ್ನು ಒಳಗೊಂಡಂತೆ ಗಣಿತದ ವಿವಿಧ ಕ್ಷೇತ್ರಗಳಿಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ ಎಂದು ಪ್ರಾಚಾರ್ಯರಾದ ಎಂ ಎ ಹಿರೇಮಠ ಹೇಳಿದರು.

ತಿಕೋಟಾ ತಾಲ್ಲೂಕಿನ ಹೊನವಾಡ ಗ್ರಾಮದ ವಿ ವಿ ಎಸ್ ಪ್ರೌಢ ಶಾಲೆಯಲ್ಲಿ ಗಣಿತಶಾಸ್ತ್ರಜ್ಞ ರಾಮಾನುಜನ್ ಜನ್ಮ ದಿನಾಚರಣೆ ನಿಮಿತ್ತ ಗಣಿತ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ರಾಮಾನುಜನ್ ಅವರ ಜೀವನವನ್ನು ಅತ್ಯಂತ ಬಡತನ ಮತ್ತು ತೊಂದರೆಯಲ್ಲಿ ಕಳೆದರು, ಆದರೆ ಇದರ ಹೊರತಾಗಿಯೂ ರಾಮಾನುಜನ್ ಅವರ ಜೀವನದಲ್ಲಿ ಅನೇಕ ಗಣಿತದ ಸೂತ್ರಗಳು ಮತ್ತು ವಿಧಾನಗಳನ್ನು ನೀಡಿದರು. ಅನೇಕ ಸಂಶೋಧನೆಗಳನ್ನು ಮಾಡಿದರು ಎಂದು ವಿವರಿಸಿದರು.

ರಾಮಾನುಜನ್ ಯವರ ಕನಸಿನಲ್ಲಿ ಚಲನೆಯ ಗಣಿತದ ಸಮೀಕರಣಗಳು ದೈವಿಕ ವರದಂತೆ ದೈವಿಕ ಅನುಗ್ರಹವಾಗಿ ಬಂದವು ಎಂದು ಸಹ ಶಿಕ್ಷಕ ಆಯ್ ಕೆ ನದಾಫ್ ಹೇಳಿದರು.

ಎಂ ಜಿ ಕುಲಕರ್ಣಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಗಣಿತ ಶಿಕ್ಷಕ ಎಂ ಜಿ ಕುಲಕರ್ಣಿಯವರನ್ನು ಹತ್ತನೇಯ ತರಗತಿ ವಿದ್ಯಾರ್ಥಿಗಳು ಸನ್ಮಾನಿಸಿದರು.

ವಿದ್ಯಾರ್ಥಿಗಳು ಗಣಿತದ ಅಂಕಿ ಸಂಖ್ಯೆಗಳನ್ನು ತೆಗೆದು ನಾಟಕ ಪ್ರದರ್ಶಿಸಿದರು.

ಈ ಸಂದರ್ಭದಲ್ಲಿ ಜೆ ಎಸ್ ಹಿರೇಮಠ, ಎಸ್ ಪಿ ಪಾತ್ರೋಟ, ಆರ್ ವಿ ಶೇಡ್ಯಾಳ, ಎಂ ಎಸ್ ಹಿರೇಮಠ, ಎಸ್ ಎ ವಾಲಿಕಾರ, ನಿವೇದಿತಾ ಹಿರೇಮಠ, ಧರೆಪ್ಪ ಸಿದ್ನಾಥ ಶಿಕ್ಷಕರು ಇದ್ದರು.

ವಿದ್ಯಾರ್ಥಿನಿ ಪೂಜಾ ಮಠಪತಿ ನಿರೂಪಿಸಿದರು. ಸಹನಾ ಕುರಗೋಡ ವಂದಿಸಿದರು.

# ಪಪಂ ಉಪ ಚುನಾವಣೆ: ನಿಷೇಧಾಜ್ಞೆ ಜಾರಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲೆಯ ಚಡಚಣ ಪಟ್ಟಣ ಪಂಚಾಯತಿಗೆ ಸಾರ್ವತ್ರಿಕ ಚುನಾವಣೆ, ಮುದ್ದೇಬಿಹಾಳ ಪುರಸಭೆಗೆ ವಿವಿಧ ಕಾರಣಗಳಿಂದ ತೆರವಾದ ವಾರ್ಡ ನಂ.18ರ ಸ್ಥಾನಕ್ಕೆ ಉಪ ಚುನಾವಣೆ ಹಾಗೂ ಮನಗೂಳಿ ಪಟ್ಟಣ ಪಂಚಾಯತ್‌ಗೆ ವಿವಿಧ ಕಾರಣಗಳಿಂದ ತೆರವಾದ ವಾರ್ಡ ಸಂ.7ರ ಸ್ಥಾನಕ್ಕೆ ಉಪ ಚುನಾವಣೆಗೆ ಡಿ.27 ರಂದು ಮತದಾನ ನಡೆಯಲಿರುವುದರಿಂದ ಶಾಂತಿಯುತ ಮತದಾನಕ್ಕಾಗಿ ಕಾನೂನು ಸುವ್ಯವಸ್ಥೆ ಕಾಪಾಡಲು ಮುನ್ನೆಚ್ಚರಿಕೆ ಕ್ರಮವಾಗಿ ಡಿ.25ರಂದು ಬೆಳಿಗ್ಗೆ 7 ರಿಂದ ಡಿ.27ರವರೆಗಿನ ಅವಧಿಯಲ್ಲಿ ಕಲಂ 144 ರನ್ವಯ ನಿಷೇಧಾಜ್ಞೆ ಜಾರಿಗೊಳಿಸಿ ಲ್ಲಾದಂಡಾಧಿಕಾರಿಗಳಾದ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಆದೇಶ ಹೊರಡಿಸಿದ್ದಾರೆ.

ಚುನಾವಣೆ ನಡೆಯುವ ನಗರ ಮತ್ತು ಸ್ಥಳೀಯ ಸಂಸ್ಥೆಗಳ ಮತಗಟ್ಟೆ ವ್ಯಾಪ್ತಿಯಲ್ಲಿ 5ಕ್ಕಿಂತ ಹೆಚ್ಚು ಜನರು ಗುಂಪುಗೂಡಿ ಓಡಾಡುವುದನ್ನು ನಿಷೇಧಿಸಿದೆ. ಶಸ್ತ್ರ, ಬಡಿಗೆ, ಬರ್ಚಿ, ಖಡ್ಗ, ಗದೆ, ಬಂದೂಕು, ಚೂರಿ ಲಾಠಿ, ಡೊಣ್ಣೆ, ಚಾಕು ಅಥವಾ ದೇಹಕ್ಕೆ ಅಪಾಯವನ್ನುಂಟು ಮಾಡಬಹುದಾದ ಯಾವುದೇ ಮಾರಕಾಸ್ತ್ರಗಳನ್ನು ತೆಗೆದುಕೊಂಡು ಹೋಗುವುದನ್ನು ಮತ್ತು ಅವುಗಳೊಂದಿಗೆ ತಿರುಗಾಡುವುದನ್ನು ಪ್ರತಿಬಂಧಿಸಲಾಗಿದೆ. ಮತಗಟ್ಟೆ ವ್ಯಾಪ್ತಿಯ 100 ಮೀಟರ್‌ಗಳ ಒಳಗೆ ಮತಕ್ಕಾಗಿ ಪ್ರಚಾರ ಮಾಡುವುದು, ಕಲ್ಲುಗಳನ್ನು, ಕ್ಷಾರ್ ಪದಾರ್ಥ ಇಲ್ಲವೇ ಸ್ಫೋಟಕ ವಸ್ತುಗಳು ಯಾವುದೇ ದಹನ, ದಾಹಕ ವಸ್ತುಗಳು ಇತ್ಯಾದಿಗಳನ್ನು ತೆಗೆದುಕೊಂಡು ಹೋಗುವುದು ಹಾಗೂ ಶೇಖರಿಸುವುದನ್ನು ನಿಷೇಧಿಸಲಾಗಿದೆ.

ಮತದಾನ ದಿನದಂದು ಮತಗಟ್ಟೆ ವ್ಯಾಪ್ತಿಯ 100 ಮೀಟರ್ ಪ್ರದೇಶದಲ್ಲಿ ಮೊಬೈಲ್ ಫೋನ್, ಕಾರ್ಡಲೆಸ್ ಫೋನ್ ಅಥವಾ ಇನ್ನಿತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ. ಶವ ಸಂಸ್ಕಾರ ಅಥವಾ ಮದುವೆ ಮತ್ತು ಧಾರ್ಮಿಕ ಮೆರವಣಿಗೆಗಳಿಗೆ ಈ ಆಜ್ಞೆ ಅನ್ವಯಿಸುವುದಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ

## ಆಸ್ಪತ್ರೆಗಳಲ್ಲಿ ಹಣ್ಣು-ಚಹಾ ವಿತರಿಸಿದ ಅಖಿಲ ಭಾರತ ಮಾನವೀಯತೆ ಸಂದೇಶ ವೇದಿಕೆ

# ಮಾನವೀಯ ಮೌಲ್ಯಗಳಿಂದ ಸುಂದರ ಸಮಾಜ ಸಾಧ್ಯ

**ಉದಯರಶ್ಮಿ ನ್ಯೂಸ್**




ಸಿಂದಗಿ: ನಗರದ ತಾಲೂಕಾ ಸರಕಾರಿ ಆಸ್ಪತ್ರೆ ಹಾಗೂ ಜಾಲಗೇರಿ ಆಸ್ಪತ್ರೆಗೆ ಅಖಿಲ ಭಾರತ ಮಾನವೀಯತೆ ಸಂದೇಶ ವೇದಿಕೆ ಪದಾಧಿಕಾರಿಗಳು, ಕಾರ್ಯಕರ್ತರು ಭೇಟಿ ನೀಡಿ, ರೋಗಿಗಳ ಆರೋಗ್ಯ ವಿಚಾರಿಸಿ ಚಹಾ ಮತ್ತು ಹಣ್ಣು-ಹಂಪಲು ವಿತರಿಸಿದರು.


ಈ ಸಂದರ್ಭದಲ್ಲಿ ಮೌಲಾನಾ ದಾವೂದ್ ನದ್ವಿ ಮಾತನಾಡಿ, ನಾವೆಲ್ಲ ಸ್ವಾರ್ಥ ಮತ್ತು ಸ್ವಂತ ಲಾಭದ ಭಾವನೆಯನ್ನು ಮರೆತು ಮಾನವರ ಸೇವೆಗೆ ಮುಂದೆ ಬರುವುದು ಅವಶ್ಯವಾಗಿದೆ. ಸಮಾಜ ಸೇವೆಯ ಹಾಗೂ ದತ್ತಿ ಕಾರ್ಯಗಳ ಮೂಲಕ ಮಾನವರ ಸೇವೆ ಮಾಡುವುದರಿಂದ ಸುಂದರ ಸಮಾಜ ನಿರ್ಮಾಣವಾಗುತ್ತದೆ. ದೇಶದಲ್ಲಿ ವಾಸಿಸುವ ಪ್ರತಿಯೊಬ್ಬ ವ್ಯಕ್ತಿಯ ಜೊತೆ ಸಹಾನುಭೂತಿ ತೋರಬೇಕು. ಮಾನವೀಯ ಮೌಲ್ಯಗಳನ್ನು ಉಳಿಸಿದರೆ ಹಾಗೂ ಸೂಕ್ತವಾದ ಪ್ರಾಯೋಗಿಕ ಕ್ರಮಗಳನ್ನು ಕೈಗೊಂಡರೆ ಮಾತ್ರ ಸಮೃದ್ಧ ದೇಶ ಮತ್ತು ಸಮಾಜವನ್ನು ನಿರ್ಮಿಸಲು ಸಾಧ್ಯ. ನೈತಿಕ ಅಧಃಪತನವನ್ನು ತಡೆಯದೆ ಹೊದರೆ, ದೇಶ ಮತ್ತು ದೇಶದಲ್ಲಿ ವಾಸಿಸುವ ಜನರ ಪರಿಣಾಮ ಕೆಟ್ಟು ಹೋಗುವುದು. ದೇಶದ ಅಖಂಡತೆ ಮತ್ತು ಜನರ ಕಲ್ಯಾಣಕ್ಕಾಗಿ ನಾವು ಮುಂದೆ ಬರಬೇಕಾಗಿದೆ. ಪ್ರಸ್ತುತ ಸಮಯದಲ್ಲಿ ಮಾನವೀಯತೆಯ ನಿಸ್ವಾರ್ಥ ಸೇವೆ ಮಾಡುವವರ ಅವಶ್ಯಕತೆ ತುಂಬಾ ಇದೆ. ಎರಡು ವಸ್ತು ದುಬಾರಿಯಾಗುತ್ತವೆ. ಒಂದು ಚಿಕಿತ್ಸೆ,ಇನ್ನೊಂದು ವಿದ್ಯಾಭ್ಯಾಸ. ಅನೇಕ ಬಡಜನರಿಗೆ ಸಹಾಯದ ಅವಶ್ಯಕತೆ ಇದೆ. ಮಾನವೀಯತೆಯ ಹಿತೈಷಿಗಳು ಮುಂದೆ ಬಂದು ಈ ಸತ್ಕಾರ್ಯದಲ್ಲಿ ಪಾಲ್ಗೊಳ್ಳಬೇಕು, ಮಾನವೀಯತೆ ಸಂದೇಶ ವೇದಿಕೆ ಈ ಎರಡು ಕ್ಷೇತ್ರಗಳಲ್ಲಿ ವಿಶೇಷವಾಗಿ ಕಾರ್ಯನಿರ್ವಹಿಸುತ್ತಿದೆ, ವೇದಿಕೆ ಪರಸ್ಪರ ಸಂಬಂಧಗಳನ್ನು ಗಟ್ಟಿಗೊಳಿಸಲು ಇಂತಹ ಕಾರ್ಯಕ್ರಮ ಹಮ್ಮಿಕೊಳುತ್ತದೆ. ಬನ್ನಿ ಈ ಪ್ರೀತಿಯ ಸಂದೇಶವನ್ನು ಹರಡೋಣ ಮತ್ತು ಮಾನವ ಸಮಾಜ ಸೇವೆ ಮಾಡಿ ದ್ವೇಷದ ಬೆಂಕಿಯನ್ನು ನಂದಿಸೋಣ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಆಸ್ಪತ್ರೆಯ ಸಿಬ್ಬಂದಿಯಲ್ಲದೆ, ಮೌಲಾನಾ ರಿಯಾಜುದ್ದೀನ್ ನದ್ವಿ, ಮೌಲಾನಾ ಕಲೀಮುಲ್ಲಾಹ ನದ್ವಿ, ಹಾಫೀಜ್ ಬಿಲಾಲ್ ಸಾಹಿಬ್ ಶಫೀಕ್ ಸಾಬ ಮತ್ತು ಫಿರೋಜ್ ಸಾಹಬ ಉಪಸ್ಥಿತ-ರಿದ್ದರು.



# ಕಾವ್ಯರಶ್ಮಿ

– ತೇರು ವಾಗೀಶ್
("ನಮ್ಮ ಕಥಾ ಅರಮನೆ" ಬರಹಗಾರರು)



## ದಾಸ ಶ್ರೇಷ್ಠ ಕನಕದಾಸರು

ದಂಡನಾಯಕನಾದರೂ
ಸಿಗದ ಸಂತೋಷ..
ಕೊಪ್ಪರಿಗೆ ನಿಧಿ ಸಿಕ್ಕರೂ
ಬಾರದ ನೆಮ್ಮದಿ...
ಎಲ್ಲವೂ ನಶ್ವರ ನಶ್ವರ
ಆದಿಕೇಶವನೊಬ್ಬನೇ ಶಾಶ್ವತ.

ಹಾಡಿದ ಪ್ರಾರ್ಥನೆಗಳೆಲ್ಲವೂ
ಕಾಗಿನೆಲೆಯ ಕೇಶವನಿಗಾಗಿ...
ಪ್ರಾರ್ಥನೆಯ ಕೀರ್ತನೆಗಳೆಲ್ಲವೂ
ಕನ್ನಡ ಸಾಹಿತ್ಯದ ಭವ್ಯ ಪರಂಪರೆಯಾಗಿ..
ನಿಮ್ಮಿ ಭಕ್ತಿಯ ಶಕ್ತಿಗೆ ಒಲಿದ
ಉಡುಪಿಯ ಕೃಷ್ಣ ಕೇಶವನಾಗಿ...

# ತುತ್ತು ಅನ್ನ ತಿನ್ನೋಕೆ ಬೊಗಸೆ ನೀರು ಕುಡಿಯೋಕೆ

# ಭಾವರಶ್ಮಿ



– ಅಭಿಜ್ಞಾ.ಪಿ.ಎಮ್.ಗೌಡ, ಮಂಡ್ಯ
("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

ಆಧುನಿಕ ಜೀವನಶೈಲಿಯೆ ವಿಭಿನ್ನ, ವಿಶೇಷವಾಗಿದೆ. ನಾನು ಯಾಕೆ ಈ ಮಾತನ್ನ ಹೇಳ್ತಿದಿನಿ ಅಂ-ದರೆ ಕೂಲಿ ಮಾಡ್ಕೊಂಡು ಜೀವನ ಮಾಡುತಿದ್ದರು ಕೂಡ ಸುಖ ಅಥವ ನಗುವಿನ ಮುಖವಾಡ ಹಾಕಿಕೊಂಡು ಬದುಕುತ್ತಿರುವುದನ್ನು ನೋಡ್ತಿದ್ದಿವಿ. ಇಲ್ಲಿ ಮನುಷ್ಯನಿಗೆ ತನ್ನ ಹುಟ್ಟಿನಿಂದ ಹಿಡಿದು ಸಾಯುವವರೆಗೂ ಕೂಡ ತೃಪ್ತಿ ಅನ್ನೋದು ಇರುವುದಿಲ್ಲ. ಎಷ್ಟೆ ಸಂಪಾದಿಸಿದರು ಮತ್ತಷ್ಟು, ಮಗದಷ್ಟು ಬೇಕು ಅನ್ನುವ ಹುಚ್ಚು ಆಸೆ. "ಅತಿಯಾಸೆ ಗತಿಗೇಡು" ಅಂತ ಗೊತ್ತಿದ್ದರು ಕೂಡ ಮತ್ತೆ ,ಮತ್ತೆ ಅದೆ ತಪ್ಪುಗಳನ್ನು ಮಾಡುತ್ತಲೆ ಬಂದಿರುವನು. ಯಾಕೆಂದರೆ ಪ್ರತಿಯೊಬ್ಬರಿಗೂ ಆಸೆಗಿಂತ ಅತಿಯಾಸೆ ಮೇಲಿನ ವ್ಯಾಮೋಹವೇ ಹೆಚ್ಚಾಗಿದೆ.!

ಮನುಷ್ಯನ ಆಸೆಗಳು,ಬಯಕೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೆ ಹೋಗುತಿವೆ.

ಇವುಗಳಿಗೆ ಕಡಿವಾಣ ಹಾಕುವವರಾರು..? ಒಬ್ಬರನ್ನು



ನೋಡಿ ಮತ್ತೊಬ್ಬರು ಆಸೆಯೆಂಬ ಮಾಯಾ ಜಾಲದೊಳಗೆ ಸಿಲುಕಿ ಒದ್ದಾಡುತ್ತಿರುವುದನ್ನ ನೋಡುತ್ತಲೆ ಇದ್ದೇವೆ."ಮೀನುಗಳು ಬಲೆಯೊಳಗೆ ಒದ್ದಾಡುವಂತೆ". ಅತಿಯಾಸೆಯ ಜಾಲದೊಳಗೆ ಸೇರಿದವರು ಸಾಲವೆಂಬ ಸುಳಿಯೊಳಗೆ ಸಿಲುಕಿ ಪಡಬಾರದ ಕಷ್ಟಗಳನ್ನು ಅನುಭವಿಸುತ್ತಿರುವರು. ತಮ್ಮ ಅಗತ್ಯವನ್ನು ಮೀರಿಸುವಂತಹ ದುರಾಸೆಗಳು, ತಮ್ಮ ಜೀವಮಾನ ಪೂರ್ಣ ದುಡಿದು ದಣಿದರು ಕೊಂಡುಕೊಳ್ಳಲಾಗದಂತಹ ಅಸಂಖ್ಯ ಆಸೆಗಳು ಅದೆಷ್ಟು ಇವೆಯೋ ಆ ದೇವರೆ ಬಲ್ಲ..! ಆದರೆ ನಮಗೆ ಯಾವುದು ತೀರಾ ಅವಶ್ಯಕವಾಗಿ ಬೇಕಾಗಿದ್ದೇನು?ಎಂಬುದನ್ನು ಚಿಂತಿಸುವುದಿಲ್ಲ.ನಮಗೆ ಮುಖ್ಯವಾಗಿ ಬೇಕಾಗಿರುವುದು ಮೂಲಭೂತವಾಗಿ ಅನ್ನ ,ನೀರು, ಉಡುಗೆ, ತೊಡುಗೆ ,ವಾಸಿಸಲು ಒಂದು ಗುಡಿಸಲು ಹೀಗೆ ಮಾನವನ ಮೂಲಭೂತ ಅಗತ್ಯಗಳಲ್ಲಿ ಮುಖ್ಯವಾದುದು ಒಂದು ಆಹಾರ, ಮತ್ತೊಂದು ಬಟ್ಟೆ.

ಇವೆರಡಿದ್ದರೆ ಸಾಕು: ನಮ್ಮ ಜೀವನವನ್ನು ಸಾಗಿಸಬಹುದು.

ಆದರೆ ಆಧುನಿಕತೆಯ ಪಾರುಪತ್ಯ ಮನುಷ್ಯನ ಜೀವನ ಶೈಲಿಯನ್ನೆ ಬದಲಾಯಿಸಿದೆ.'ಚಾರ್ಲ್ಸ್ ಡಾರ್ವಿನ್' ರವರ'

"ಉಳಿವಿಗಾಗಿ ಹೋರಾಟ" ವಾದವೂ ಕೂಡ ಇದೆ ಹೇಳುವುದು.ನಮ್ಮ ಎಲ್ಲಾ ಹೋರಾಟಗಳು, ನಮ್ಮ ದುಡಿಮೆಗಳೆಲ್ಲವೂ ಆಹಾರ ಮತ್ತು ಬಟ್ಟೆ ಪೂರೈಸಿಕೊಳ್ಳುವುದಕ್ಕಾಗಿಯೇ..! ನಡೆಯುತ್ತಿರುವುದನ್ನು ನೋಡುತ್ತಿರುವೆವು. ಪುರಂದರ ದಾಸರ ಕೀರ್ತನೆಯೊಂದರ ಸಾಲು ಅದ್ಭುತವೆನಿಸಿದೆ. "ಎಲ್ಲಾರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ"ಈ ಮಾತು ತುಂಬಾ ಅರ್ಥಪೂರ್ಣವಾಗಿದೆ.ಮೊದಲಿಗೆ ಹೊಟ್ಟೆಯ ಹಸಿವನ್ನು ನೀಗಿಸಿದರೆ ಉಳಿದೆಲ್ಲ ಕಾರ್ಯಗಳು ಸುಗಮವೆಂದು ತಿಳಿಸಿರುವರು.

ಆದ್ದರಿಂದ ನಮ್ಮೆಲ್ಲರ ಕೊನೆ, ಮೊದಲಿಲ್ಲದ ಆಸೆಗಳಿಗೆ ಕಡಿವಾಣ ಅಗತ್ಯವಾಗಿದೆ.ಇಲ್ಲದಿದ್ದರೆ ಕೊನೆಯಿಲ್ಲದ ಆಸೆಗಳಿಂದಾಗಿ ಮಾನವನ ಅಳಿವು ಸಹ ಸಮೀಪಿಸುವುದು.ಆಸೆಯೆಂಬ ಆಕಾಶ ಎತ್ತರೆತ್ತರವಾದರೆ ಬಾಳೆಂಬ ಯಾನವು ಕೂಡ ಕಠಿಣ.

ಉದಾಹರಣೆಗೆ- ಹಲ್ಲಿದ್ದರೆ ಕಡಲೆಯಿಲ್ಲ; ಕಡಲೆಯಿದ್ದರೆ ಹಲ್ಲು ಇಲ್ಲವೆಂಬ ಚಿಂತೆ.

ಮಕ್ಕಳಿಲ್ಲದಿದ್ದರೆ ಮಕ್ಕಳು ಬೇಕೆಂಬ ವ್ಯಥೆ.

ಮಕ್ಕಳಿದ್ದರೆ ಮನೆ ತುಂಬಾ ಸಂಪತ್ತಿರಬೇಕೆಂಬ

ವ್ಯಥೆ.ಹೀಗೆ ಮನುಷ್ಯನಿಗೆ 'ಆಸೆಗಳಿಗೆ ಬರವಿಲ್ಲ ಮಾತುಗಳಿಗೆ ತಡೆಯಿಲ್ಲ'. ಕಾಣುವ ಕನಸುಗಳಿಗಂತು ಮಿತವು ಇಲ್ಲ ಹಿತವು ಇಲ್ಲ ಎಲ್ಲ ದುಬಾರಿಯೇ.. ಎಲ್ಲವೂ ಆರೋಹಣದ ಲೆಕ್ಕಾಚಾರ. ದುಡಿಯದಿದ್ದರು ಆಕಾಶವೇರುವ ಮನಸು ಹಾಗೆಯೇ ಎಲ್ಲವೂ ನಮ್ಮ ಮುಂದೆ ಬಂದು ಬೀಳಬೇಕೆಂಬ ಕನಸು.ಆಸೆಗಳಿಗೆ ಮಿತ ಇರದಿದ್ದರೆ ಜೀವನ ಮುರಾಬಟ್ಟೆಯೆ ಸರಿ..!ಬುವಿಯ ಮೇಲೆ ಬದುಕಿದ್ದಾಗ ಬದುಕು ಸಾರ್ಥಕ್ಯದ ನಿಟ್ಟಿನಲ್ಲಿ ಸಾಗಬೇಕೆ ಹೊರತು ನೀಚತನದ್ದು ಒಂದು ಬದುಕಾಗಬಾರದು.

ಸ್ವಾರ್ಥವಿಲ್ಲದೆ ಜೀವನ ಸಾಗಿಸಲು "ತುತ್ತು ಅನ್ನ ತಿನ್ನೋಕೆ ಬೊಗಸೆ ನೀರು ಕುಡಿಯೋಕೆ" ಇದ್ರೆ ಸಾಕು ಅದೆ ನೆಮ್ಮದಿಯು ಹೂರಣ. ಅದನ್ನ ಬಿಟ್ಟು ಮನಸ್ಸನ್ನು ನಾನಾ ಕಡೆಗಳಲ್ಲಿ ಹರಿಯುಲು ಬಿಟ್ಟರೆ ಅತಿಯಾಸೆಗೆ ಬಲಿಯಾಗಿ ಜೀವನವನ್ನ ಹಾಳುಮಾಡಿಕೊಳ್ಳಬೇಕಾಗುತ್ತದೆ.

ನಮ್ಮ ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳದೆ,ಮನಸ್ಸಿನಲ್ಲಿ ಬಯಕೆಯ ಬೀಜವನ್ನು ಬಿತ್ತಿಕೊಂಡು ಅದ-ರಿಂದ ಸರಿಯಾದ ಫಸಲು ಬಾರದೆ ಇದ್ದಾಗ ದುಃಖಿಸುವುದು ನಾವೇ ಅಲ್ವಾ.?ಇದಕ್ಕೆಲ್ಲ ಕಾರಣವೂ ಕೂಡ ನಾವೆ..!ಅದರ ಜೊತೆಗೆ ಸುಮ್ಮನಿರದೆ ಬಯಕೆ, ಹಂಬಲ, ಆಸೆ, ಅಪೇಕ್ಷೆಗಳ ಬೀಜವನ್ನು ಬಿತ್ತುಕೊಂಡು ಅವೆಲ್ಲ ನೆರವೇರದಿದ್ದಾಗ ದುಃಖಿಸುವವರು ನಾವೇ..!ನಮ್ಮ ಇಂಥಹ ಪರಿಸ್ಥಿತಿಯನ್ನು ಶ್ರೀ ಕೃಷ್ಣಪರಮಾತ್ಮ ಭಗವದ್ಗೀತೆಯಲ್ಲಿ



ನಮಗೆಲ್ಲ "ಯದೃಚ್ಛಾಲಾಭಸಂತುಷ್ಟ" ಎಂದು ಸುಬೋಧವನ್ನು ಮಾಡಿದ. ನಮ್ಮಲ್ಲಿ ಏನು ಇರುತ್ತೊ ಅದರಲ್ಲಿಯೇ ಆನಂದಪಡು ಮತ್ತು ಇದ್ದಷ್ಟರಲ್ಲಿಯೇ ತೃಪ್ತಿಪಡು ಎಂದು.

ಪರಮಾತ್ಮನ ಈ ಮಾತುಗಳಿಗೆ ನಾವೆಲ್ಲರು ಕಿವಿಯಾನಿಸಿದರೆ ಒಳಿತನ್ನು ಕಾಣಬಹುದು.

ಇಲ್ಲದಿದ್ದರೆ ನಮ್ಮ ದುಃಖ, ದುಮ್ಮಾನಗಳಿಗೆ ನಾವೇ ಕಾರಣ-ಕರ್ತರಾಗುವೆವು.

ಆಸೆಯೇ ದುಃಖಕ್ಕೆ ಕಾರಣ ಎಂದು ಬುದ್ಧ ಹೇಳಿದ್ದರೂ,ಈ ವಿಷಯವನ್ನು ಸ್ವಲ್ಪ ಆಳವಾಗಿ ಆಲೋಚಿಸಿದಾಗ ಆಸೆ ಅಲ್ಲ, "ದುರಾಸೆಯೇ ದುಃಖಕೆ ಕಾರಣ" ಅಂತ ಹೇಳಬಹುದು. ಏಕೆಂದರೆ ಮನುಷ್ಯನಾದವನು ಆಸೆಗಳನ್ನು ಹೊಂದ ಬಾರದೆ?ನನ್ನ ಪ್ರಕಾರ ಖಂಡಿತ ಹೊಂದಬೇಕು.ಆಸೆಗಳೇ ಇಲ್ಲದಿದ್ದರೆ ಮನುಷ್ಯ ಜೀವಿಸುವುದಾದರೂ ಏತಕ್ಕೆ? ಎಂಬ ಹಲವಾರು ಪ್ರಶ್ನೆಗಳು ಉದ್ಭವಿಸುತ್ತವೆ. ಪ್ರತಿಯೊಬ್ಬರೂ ಬದುಕಬೇಕಾದರೆ ತಮ್ಮದೇ ಆದ ಆಸೆಗಳು ಇದ್ದೆ ಇರುತ್ತವೆ.ಪ್ರತಿ ಮನುಷ್ಯನೊಳಗಿರುವ ದುರಾಸೆಗಳಿಗಂತು ಕಡಿವಾಣ ಹಾಕಲೆಬೇಕು.ಯಾವುದೇ ಆಗಲಿ ಅತಿಯಾದರೆ ಅಮೃತವು ವಿಷವಾಗುತ್ತದೆ.ಆದ್ದರಿಂದ ಜೀವನ ನೆಮ್ಮದಿಯಿಂದ ಸಾಗಬೇಕಾದರೆ ಸಮಸ್ಥಿತಿಯಿಂದ ಇರಬೇಕಾಗುತ್ತದೆ.

"ಎನಿತೊಂದು ಸಾಮಾಗ್ರಿ ಬಾಳಿನಲಿ ಬೇಕಿಲ್ಲ

ಉಪಭೋಗ ಸಂಸ್ಕೃತಿಗೆ ದಾಸರೋ ನಾವು.!

ಎಷ್ಟು ಸರಳತೆ ನಮದೂ ಅಷ್ಟು ನೆಮ್ಮದಿ ನಮದು.!ಸರಳತೆಯೆ ಸುಂದರವೂ ಮುದ್ದು ರಾಮ"

ಕೆ ಶಿವಪ್ಪನವರ ಈ ಕವಿತೆ ಅದೆಷ್ಟು ಅರ್ಥಪೂರ್ಣವಾಗಿದೆ..ಬೇಕಾಗಿರುವುದಕಿಂತ ಬೇಡದ ಸರಕುಗಳೆ ನಮ್ಮ ಮನೆ ಮನಗಳನ್ನು ತುಂಬಿಕೊಂಡು ಕಸದ ತೊಟ್ಟಿಯನ್ನಾಗಿ ಮಾಡಿಕೊಂಡಿರುವೆವು. ಹಾಗೆ ನೋಡಿದರೆ ನಮಗೆ ಅಗತ್ಯವಾಗಿ ಬೇಕಾಗಿರುವುದಕ್ಕಿಂತ ಬೇಡದ ಸಾಮಾಗ್ರಿಗಳೆ ಹೆಚ್ಚಾಗಿವೆ ಎಂದರೆ ತಪ್ಪಾಗಲಾರದು.ಯಾವುದೆ ಆಸೆಗಳಿಗೆ ವಿಚಲಿತರಾಗದೆ ಅತೃಪ್ತತೆಯಿಂದ ಹೊರಬರಬೇಕು ಹಾಗೆಯೆ ಆಸೆಗಳ ವಿಚಾರದಲಿ ವಿವೇಚನೆಯಿಂದ ಹೆಜ್ಜೆಯಿರಿಸಿ ಆಸೆಗಳ ದಾಸರಾಗದೆ ನಮ್ಮ ಇತಿಮಿತಿಗಳೊಡನೆ ಸಾಗಿದರೆ ಜೀವನ ಸಾರ್ಥಕವಾಗುವುದು. ಆಸೆಗಳಿಗೆ ದಾಸರಾದರಂತು ಮಾಡಬಾರದ ದುಷ್ಕೃತ್ಯಗಳನ್ನು ಮಾಡುವರು.ಬಡವರೆದೆಯ ಮೇಲೆ ತಮ್ಮ ಬಯಕೆಗಳೆಂಬಗೋರಿಯನ್ನು ಸ್ಥಾಪಿಸಿಕೊಂಡು ಮೆರೆಯುತಿದ್ದು, ಸ್ವಾರ್ಥ ಅಸೂಯೆ, ಹಿಂಸೆಗಳು, ದ್ವೇಷಗಳೆಂಬ ದುರ್ಗಣಗಳನ್ನು ಬೆಳೆಸಿಕೊಂಡು ದುಷ್ಟರು, ಭ್ರಷ್ಟರು, ನೀಚರಂತೆ ವರ್ತಿಸುತ್ತ.ಪ್ರೀತಿ ,

ವಿಶ್ವಾಸ ,ಬಂಧು, ಬಳಗ, ಅನುಕಂಪ ,ಕರುಣೆ,

ದಯೆ, ಸ್ನೇಹ ,ದಾನ ಧರ್ಮ ,ನ್ಯಾಯ ,

ನೀತಿ ,ಮಾನವೀಯತೆಯನ್ನೆ ಮರೆತು. ಕೀಳುಮಟ್ಟಕ್ಕಿಳಿದು ತಮ್ಮ ತನವನ್ನೆ ಕಳೆದುಕೊಳ್ಳುತ್ತಿರುವರು. ಜಾತಿ, ಧರ್ಮ, ಪಂಗಡಗಳ ಹೆಸರಿನಲ್ಲಿ ಗಲಭೆ ,ಭ್ರಷ್ಟಾಚಾರ, ಕೊಲೆ ,ಅತ್ಯಾಚಾರ ಇತ್ಯಾದಿಗಳಿಗೆ ಎಡೆ ಮಾಡಿಕೊಟ್ಟದ್ದ-ರಿಂದ ಸಮಾಜದಲ್ಲಿ ಅರಾಜಕತೆ ತಲೆದೂರುತದೆ.ಅಸಾಯಕತೆಯಿಂದಾಗಿ

ಸೋಮಾರಿತನ, ದ್ವೇಷಾಸುಯೆಗಳು ,ಮೇಲುಕೀಳೆಂಬ ಭಾವನೆಗಳಿಂದಾಗಿ ರೌದ್ರ ರೂಪ ಪಡೆಯುತಿರುವುದು ಮಾತ್ರ ಸುಳ್ಳಲ್ಲ.

ತುತ್ತು ಅನ್ನ ತಿನ್ನೋಕೆ ಅಂದರೆ ಹಸಿವು ಅನ್ನೋದು ಯಾವುದೇ ಒಂದು ಜೀವಿಯನ್ನು ಬಿಟ್ಟಿದ್ದಲ್ಲ. ಮನುಷ್ಯ ಜೀವಿ ಅದೆಷ್ಟೆ ಹಣವನ್ನು ಸಂಪಾದಿಸಿರಬಹುದು ,ಅದೆಷ್ಟು ಧನಕನಕಗಳನ್ನು ಇಟ್ಟಿರಬಹುದು ಆದರೆ ಹಸಿವಾದಾಗ ಆಹಾರವನ್ನೆ ತಿನ್ನಬೇಕು ಹಣವನ್ನಲ್ಲ.ಅನ್ನದ ಮಹತ್ವ ಅದ್ಭುತ ಅನನ್ಯ.ಮನೆಯೊಳಗೆ ಚಿನ್ನದ ರಾಶಿಯೆ ಇದ್ದರು ತಿನ್ನುವುದು ಮಾತ್ರ ಅನ್ನವನ್ನೆ. ಅಷ್ಟು ಪವಿತ್ರವಾದುದ್ದು.. ಎಷ್ಟೇ ಧನಕನಕಗಳನ್ನು ಕೊಟ್ಟರೂ ಮನುಷ್ಯನನ್ನು ದಣಿಸುವುದು ಸಾಧ್ಯವೇ ಇಲ್ಲ. ಇಷ್ಟು ದೊರಕಿದರೆ ಮತ್ತಷ್ಟು ಬೇಕೆಂಬಾಸೆ.ಮನುಷ್ಯನ ಆಸೆಗೆ ಕೊನೆಯಿಲ್ಲ.ಅನ್ನದಾನ ಶ್ರೇಷ್ಟದಾನ.

ಅನ್ನ ಬರಿ ಅಗುಳಲ್ಲವದು ಪರಬ್ರಹ್ಮ. ಒಂದು ತುತ್ತು ಸಿಕ್ಕರು ತೃಪ್ತಿಯಿಂದ ಸೇವಿಸೋಣ.

ಊಟ ಬಲ್ಲವನಿಗೆ ರೋಗವಿಲ್ಲ ಎನ್ನುತ್ತಾರೆ..ಹೌದೂ ನಾವು ತಿನ್ನುವ ಆಹಾರ ಪ್ರಮಾಣ, ಶುದ್ಧತೆ, ಸಮಯವನ್ನು ಅವಲಂಬಿಸಿರುತ್ತದೆ. ಆದರೆ ತಿನ್ನುವ ಪ್ರಮಾಣದಲ್ಲಿ ಪ್ರತಿಯೊಬ್ಬರು ಒಂದೊಂದು



ರೀತಿಯಲ್ಲಿ ಇರುವರು.ಕೆಲವರು ಅವರವರ ಹೊಟ್ಟೆಗೆ ಇಡಿಸಿದಷ್ಟು ತಿನ್ನುವರು.ಒಬ್ಬ ಎರಡೇ ರೊಟ್ಟಿಗೆ ತೃಪ್ತನಾದರೆ, ಮತ್ತೊಬ್ಬನಿಗೆ ಅದು ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಆಗಿಹೋಗಿಬಿಡಬಹುದು.

ಒಂದು ಕವಿವಾಣಿಯು ಹೀಗೆ ಹೇಳುತ್ತದೆ

"ಒಂದೊತ್ತು ಉಂಡವನು ಯೋಗಿ
ಎರಡೊತ್ತು ಉಂಡವನು ಭೋಗಿ
ಮೂರೊತ್ತು ಉಂಡವನು ರೋಗಿ
ನಾಲ್ಕೊತ್ತು ಉಂಡವನನ್ನು ಹೊತ್ಕೊಂಡು ಹೋಗಿ"ಎಂಬ ಮಾತು ನಿಜ ಅರ್ಥಪೂರ್ಣವಾಗಿದೆ..ಹಾಗೆಯೇ ನಾವು ಸೇವಿಸುವ ಅನ್ನಕ್ಕೂ, ನಮ್ಮ ಆಯುಸ್ಸಿಗೂ ನಿಕಟ ಸಂಬಂಧವಿದೆ.ನಾವು ಹೆಚ್ಚು ಹೆಚ್ಚು ವೇಗವಾಗಿ ತಿಂದರೆ ಆಯಸ್ಸು ಕಡಿಮೆ ಹಾಗು ನಿಧಾನವಾಗಿ ಕಡಿಮೆ ತಿಂದರೆ ಆಯಸ್ಸು ಹೆಚ್ಚು ಎಂದು ಹೇಳಿರುವುದನ್ನು ಕೇಳಿರುವೆ. ಆದ್ದರಿಂದ ನಮ್ಮ ಜೀವನ ಅತಿಯಾಸೆಯಿಂದ ಅವಸನಗೊಳ್ಳುವುದು ಬೇಡ.ತುತ್ತು ಅನ್ನ ತಿನ್ನೋಕೆ ಬೊಗಸೆ ನೀರು ಕುಡಿಯೋಕೆ ಎಂಬ ಮಾತಿನ ಹಾದಿಯುಲ್ಲಿ ಇತಿಮಿತಿಯ ಆಸೆಗಳನ್ನೊತ್ತು ಸಾಗೋಣ ತೃಪ್ತಿಯಿಂದ ಬದುಕೋಣ...ಆಸೆಗಳು ಮುಳುವಾಗದಿರಲಿ,

ಜೀವನ ಬೆಂಡಾಗದಿರಲಿ.ಜೀವನ ನಿರ್ವಹಣೆಕ್ಕಾಗಿ ಧನಕನಕಗಳು ಅನಿವಾರ್ಯವಲ್ಲ.ಆಹಾರ ಅನಿವಾರ್ಯ.

ಧನಕನಕಗಳೆಲ್ಲ ಬಯಕೆಗಳೆಂಬ ಸಾಮಾಗ್ರಿಗಳು ಇರಲಿ ಅಗತ್ಯವಿರುವಷ್ಟು ಅನಗತ್ಯ ಬೇಡ.ನಮಗೆ ಬೇಕಿರುವುದು ಹಸಿವಿಗಾಗಿ ಅನ್ನದ ಅಗುಳುಗಳು ಕುಡಿಯಲು ಬೊಗಸೆ ನೀರು..